ಕರ್ನಾಟಕ ಸರ್ಕಾರ

# ಸವಿ ಕನ್ನಡ

## ಅಭ್ಯಾಸ ಸಹಿತ ಪಠ್ಯಪುಸ್ತಕ

## ಭಾಗ–1

೩

## ಮೂರನೆಯ ತರಗತಿ

NOT TO BE REPUBLISHED @KTBS

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
೬ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦ ೦೦೩.

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು**

**ಡಾ॥ ನರಸಿಂಹಮೂರ್ತಿ ಆರ್,** ಮುಖ್ಯಸ್ಥರು, ಕನ್ನಡ ವಿಭಾಗ, ಶ್ರೀ ಗೋಕರ್ಣನಾಥೇಶ್ವರ ಕಾಲೇಜು, ಮಂಗಳೂರು.

**ಸದಸ್ಯರು**

**ಶ್ರೀ ದೊಡ್ಡಣ್ಣ ಹೆಚ್ ಗದ್ದನಕೇರಿ,** ಸಹ ಶಿಕ್ಷಕರು, ಸರಕಾರಿ ಪ್ರೌಢ ಶಾಲೆ, ತುಳಸಗೇರಿ, ಬಾಗಲಕೋಟೆ ತಾಲ್ಲೂಕು.

**ಶ್ರೀ ಇಂದ್ರ ಕುಮಾರ್ ಎಚ್.ಬಿ.,** ಸಹ ಶಿಕ್ಷಕರು, ಸರಕಾರಿ ಹಿ.ಪ್ರಾ.ಶಾಲೆ, ಕುರ್ಕಿ, ದಾವಣಗೆರೆ ತಾಲ್ಲೂಕು.

**ಶ್ರೀಮತಿ ಬಿ. ಕೆ. ಧನಲಕ್ಷ್ಮಿ, ಬಿ.ಆರ್.ಪಿ,** ಬ್ರಹ್ಮಾವರ ವಲಯ, ಉಡುಪಿ ತಾಲ್ಲೂಕು.

**ಶ್ರೀ ಕೆ.ಬಿ. ಕೆಂಡಗಣ್ಣಸ್ವಾಮಿ,** ಸರಕಾರಿ ಪ.ಪೂ.ಕಾಲೇಜು (ಪ್ರೌಢಶಾಲೆ ವಿಭಾಗ), ಮೆಣಸೀಕ್ಯಾತನಹಳ್ಳಿ, ತಿ. ನರಸೀಪುರ ತಾ॥, ಮೈಸೂರು ಜಿಲ್ಲೆ.

**ಕಲಾವಿದರು**

**ಶ್ರೀ ಜಾನ್ ಚಂದ್ರನ್,** ಚಿತ್ರಕಲಾ ಶಿಕ್ಷಕರು, ಸಂತ ಅಲೋಶಿಯಸ್ ಪ್ರೌಢಶಾಲೆ, ಮಂಗಳೂರು.

**ಪರಿಶೀಲಕರು**

**ಡಾ॥ ಬಿ. ಪ್ರಕಾಶ,** ಕನ್ನಡ ಅಧ್ಯಾಪಕರು, ಎನ್.ಐ.ಟಿ.ಕೆ., ಪ್ರೌಢಶಾಲೆ, ಸೂರತ್ಕಲ್, ದಕ್ಷಿಣ ಕನ್ನಡ ಜಿಲ್ಲೆ.

**ಸಂಪಾದಕ ಮಂಡಳಿ ಸದಸ್ಯರು:**

**ಪ್ರೊ. ಚಂದ್ರಶೇಖರ ಪಾಟೀಲ್,** ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ. ನಗರ, ಬೆಂಗಳೂರು–೭೮

**ಡಾ. ಕೆ. ಮರುಳಸಿದ್ದಪ್ಪ,** ಸಾಹಿತಿಗಳು, ನಂ ೧೩೭, ೧೨ನೇ ಕ್ರಾಸ್, ಜೆ.ಪಿ. ನಗರ, ಬೆಂಗಳೂರು–೭೮

**ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, ರಾಗಿಣಿ, ಹಂಪಿನಗರ, ಬೆಂಗಳೂರು.

**ಪ್ರೊ. ಅ.ರಾ.ಮಿತ್ರ,** ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

**ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಶಿಕ್ಷಣ ವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಜ್ಞಾನಶಕ್ತಿ ಆವರಣ, ತೊರವಿ, ವಿಜಯಪುರ.

**ಮುಖ್ಯ ಸಂಯೋಜಕರು:**

**ಪ್ರೊ. ಜಿ.ಎಸ್.ಮುಡಂಬಡಿತ್ತಾಯ,** ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯ ಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು – ೫೬೦ ೦೮೫

**ಸಲಹೆ ಮತ್ತು ಮಾರ್ಗದರ್ಶನ:**

**ಶ್ರೀ ನಾಗೇಂದ್ರ ಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು – ೮೫.

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು – ೫೬೦ ೦೮೫

**ಕಾರ್ಯಕ್ರಮ ಸಂಯೋಜಕರು:**

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು – ೮೫.

@KTBS NOT TO BE REPUBLISHED

# ಮುನ್ನುಡಿ

೨೦೦೫ನೆಯ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೆಯ ಸಾಲಿನಿಂದ ಒಂದನೆಯ ತರಗತಿಯಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೆಯ ತರಗತಿಯವರೆಗೆ ಪರಿಸರ ಅಧ್ಯಯನ, ಗಣಿತ ಮತ್ತು ೬ ರಿಂದ ೧೦ ನೆಯ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

**೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.**

- ಕಲಿಕೆಯನ್ನು ಜೀವನದ ಆವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನವನ್ನು ಸಂಯೋಜಿಸುವುದು.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

© KTBS NOT TO BE REPUBLISHED

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಗಳಿಸಿಕೊಳ್ಳುವಂತೆ ಪ್ರಯತ್ನ ಮಾಡಲಾಗಿದೆ. ಪಠ್ಯಪುಸ್ತಕಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲಗಳ ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

@KTBS NOT TO BE REPUBLISHED

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

## ಓದಿಗೆ ಮುನ್ನ...

# ಪಠ್ಯಪುಸ್ತಕ ರಚನೆಯ ಮುಖ್ಯಾಂಶಗಳು

### ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫:

೨೦೦೫ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ, 'ಮಗುವು ಜ್ಞಾನವನ್ನು ತಾನೇ ರಚಿಸಿಕೊಳ್ಳುತ್ತದೆ ಎಂಬ ಅಂಶವನ್ನು ಆಧರಿಸಿ ಪಠ್ಯಕ್ರಮ, ಪಠ್ಯವಸ್ತು ಮತ್ತು ಪಠ್ಯಪುಸ್ತಕಗಳ ರಚನೆ ಆಗಬೇಕು. ಶಿಕ್ಷಕರು ತರಗತಿಯ ಅನುಭವಗಳನ್ನು ಮಗುವಿನ ಸ್ವಭಾವ ಮತ್ತು ಪರಿಸರ ಇವಕ್ಕೆ ಸರಿಹೊಂದಿಸುವಂತೆ ರಚಿಸಬೇಕು. ಎಲ್ಲ ಮಕ್ಕಳಿಗೂ ಕಲಿಯಲು ಸಮಾನ ಅವಕಾಶವನ್ನು ಒದಗಿಸಬೇಕು' ಎಂಬುದನ್ನು ಸೂಚಿಸುತ್ತದೆ. ಕಲಿಯಬೇಕೆಂಬ ಮಗುವಿನ ಸಹಜ ಆಸೆ ಮತ್ತು ಅದರ ಕಲಿಕೆಯ ತಂತ್ರಗಳನ್ನು ವೃದ್ಧಿಸುವುದೂ ಸಹ ಇದರ ಗುರಿಯಾಗಿರಬೇಕು ಎಂಬ ಅಂಶವನ್ನು ಪ್ರಸ್ತಾಪಿಸಿದೆ. ಶಿಕ್ಷಣದ ಈ ಉದ್ದೇಶ ಮತ್ತು ಗುರಿಗಳನ್ನು ಗಮನದಲ್ಲಿಟ್ಟುಕೊಂಡು ಪಠ್ಯ ಪುಸ್ತಕವನ್ನು ರಚಿಸಲಾಗಿದೆ.

### ಸಾಮರ್ಥ್ಯ ಮತ್ತು ಸಾಮರ್ಥ್ಯ ಆಧಾರಿತ ಪಠ್ಯಾಂಶ :

ಗೊತ್ತುಪಡಿಸಿದ ತರಗತಿ ಮತ್ತು ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿಯು ಒಂದು ಶೈಕ್ಷಣಿಕ ವರ್ಷದಲ್ಲಿ ಗಳಿಸಲೇಬೇಕೆಂದು ನಿರ್ಧರಿಸಿರುವ ಕೌಶಲವನ್ನು ಸಾಮರ್ಥ್ಯ ಎಂಬ ಹೆಸ-ರಿನಿಂದ ಕರೆಯಬಹುದಾಗಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಈ ಸಾಮರ್ಥ್ಯಗಳನ್ನು ಒಳಗೊಂಡಿದೆ. ನಿರ್ಧಾರಿತ ಸಾಮರ್ಥ್ಯಗಳು ವಿದ್ಯಾರ್ಥಿಯಲ್ಲಿ ಉಂಟಾಗಲು ಸಹಕಾರಿಯಾಗುವಂತೆ ಪಠ್ಯ ಪುಸ್ತಕವನ್ನು ರಚಿಸಲಾಗಿದೆ.

ಅಪೇಕ್ಷಿತ ಸಾಮರ್ಥ್ಯವು ವಿದ್ಯಾರ್ಥಿಯಲ್ಲಿ ಉಂಟಾಗಲು ಪಠ್ಯ ವಿಷಯ, ಬೋಧನಾ ಕಲಿಕಾ ಪ್ರಕ್ರಿಯೆ ಮತ್ತು ಚಟುವಟಿಕೆಗಳು ಪ್ರಧಾನ ಪಾತ್ರವಹಿಸುತ್ತವೆ. ಇದನ್ನು ಮನಗಂಡು ಪಠ್ಯ ವಿಷಯವನ್ನು ಸಾಮರ್ಥ್ಯ ಆಧಾರಿತವಾಗಿ ರಚಿಸಲಾಗಿದೆ.

@KTBS NOT TO BE REPUBLISHED

### ಪಠ್ಯಪುಸ್ತಕದ ಒಳನೋಟದ ಮುಖ್ಯಾಂಶಗಳು :

ಈ ಪಠ್ಯಪುಸ್ತಕದ ಪಾಠ ಮತ್ತು ಪದ್ಯಗಳಲ್ಲಿ ಕಲಿಕಾತತ್ತ್ವ ಆಧಾರಿತ ಹಂತಗಳನ್ನು ಗಮನಿಸಬಹುದಾಗಿದೆ. ಅವುಗಳೆಂದರೆ,

**೧. ಕಲಿಕೆಗೆ ಪೂರಕ ಹಂತ :** ಕಲಿಕೆಗೆ ಪೂರಕ ಹಂತದ ಚಟುವಟಿಕೆಯನ್ನು ಆಧರಿಸಿ ವಿದ್ಯಾರ್ಥಿಗಳನ್ನು ಚಟುವಟಿಕೆಯಲ್ಲಿ ತೊಡಗಿಸಿ ಕಲಿಕೆಗೆ ಅಣಿಗೊಳಿಸಬೇಕಿದೆ. ಕಲಿಕೆಯ ಪೂರಕ ಹಂತಕ್ಕೆಂದು ಇಲ್ಲಿ ನೀಡಿರುವ ಚಟುವಟಿಕೆಯೇ ಅಂತಿಮ ಅಥವಾ ಸರ್ವೋತ್ಕೃಷ್ಟ ಎಂಬ ಕಲ್ಪನೆಯನ್ನು ಹೊಂದದೆ ಸಾಮರ್ಥ್ಯ, ಪಠ್ಯ ವಿಷಯ ಮತ್ತು ತರಗತಿಯ ಸನ್ನಿವೇಶಕ್ಕೆ ಅನುಗುಣವಾಗಿ ಸೂಕ್ತ ಚಟುವಟಿಕೆಯನ್ನು ಅಳವಡಿಸಿಕೊಂಡು ಕಲಿಕಾ ಪೂರಕ ಹಂತದ ಉದ್ದೇಶವನ್ನು ಸಾಕಾರಗೊಳಿಸಲು ಶಿಕ್ಷಕರು ಸ್ವತಂತ್ರರು.

**೨. ಕಲಿಕಾಂಶ ಹಂತ :** ಈ ಹಂತದಲ್ಲಿ ಸಾಮರ್ಥ್ಯ ಆಧಾರಿತ ಪದ್ಯ ಅಥವಾ ಪಾಠ ಇರುತ್ತದೆ. ಪಠ್ಯಾಂಶದ ಬೋಧನಾ ಕಲಿಕಾ ಪ್ರಕ್ರಿಯೆಗೆ ಮುನ್ನ ಶಿಕ್ಷಕರು ಸಾಮರ್ಥ್ಯ ಹಾಗೂ ಪಠ್ಯಾಂಶವನ್ನು ಓದಿ ಅರ್ಥೈಸಿಕೊಳ್ಳಬೇಕು. ಈ ಪಠ್ಯ ವಿಷಯದ ಮೂಲಕ ವಿದ್ಯಾರ್ಥಿಯಲ್ಲಿ ಯಾವ ಸಾಮರ್ಥ್ಯವನ್ನು ಬೆಳೆಸಬೇಕು, ಅದಕ್ಕಾಗಿ ಯಾವ ತಂತ್ರ/ವಿಧಾನವನ್ನು ಅನುಸರಿಸಬೇಕು ಎಂಬುದನ್ನು ನಿರ್ಧರಿಸಿಕೊಳ್ಳಬೇಕು. ಇದಕ್ಕೆ ಬೇಕಾದ ಸಿದ್ಧತೆ ಮಾಡಿಕೊಂಡ ಅನಂತರವೇ ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿದರೆ ಅಪೇಕ್ಷಿತ ಗುರಿಯನ್ನು ಗುಣಾತ್ಮಕವಾಗಿ ಸಾಧಿಸಬಹುದು.

**ಪಠ್ಯ ವಿಷಯ, ಸಾಹಿತ್ಯದ ಬಳಕೆ :**

* ಸ್ಪಷ್ಟ ಹಾಗೂ ನಿರರ್ಗಳ ಓದಿನ ಅಭ್ಯಾಸಕ್ಕೆ.
* ಓದುವ ಮೂಲಕ ಹೊಸ ಪದಗಳನ್ನು ಗುರ್ತಿಸಿ ಅವುಗಳ ಅರ್ಥವನ್ನು ತಿಳಿಯುವ ಅಭ್ಯಾಸಕ್ಕಾಗಿ.
* ಓದುವ ಮೂಲಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಅಭ್ಯಾಸಕ್ಕಾಗಿ.
* ಕೇಳುಗರಿಗೆ ಅರ್ಥವಾಗುವಂತೆ ಓದುವ ಕೌಶಲ ಬೆಳೆಸಿಕೊಳ್ಳಲು.
* ನಾಮಪದ, ವಚನ, ಲಿಂಗ, ಕಾಲ, ಪ್ರಾಸಪದ ಇತ್ಯಾದಿ ಭಾಷಾಭ್ಯಾಸಕ್ಕೆ ಪೂರಕವಾದ ಚಟುವಟಿಕೆಗೆ/ ಮೌಲ್ಯಮಾಪನಕ್ಕೆ ಪೂರಕ ಸಾಮಗ್ರಿಯಾಗಿ ಬಳಸಿಕೊಳ್ಳಲು (ಉದಾ: ಏಕವಚನ ಪದಗಳನ್ನು ಗುರುತಿಸಲು. ಸ್ತ್ರೀ/ಪುರುಷ ರೂಪದ ಪದಗಳನ್ನು ಪಟ್ಟಿ ಮಾಡಲು ಇತ್ಯಾದಿ)
* ನಾಟಕ ಪ್ರಯೋಗಕ್ಕೆ ಬಳಸಿಕೊಳ್ಳಲು.

**೩. ಅಭ್ಯಾಸ ಹಂತ :**

**ಅ) ಪಠ್ಯ ಆಧಾರಿತ :** ಈ ಹಂತದಲ್ಲಿ ಪಠ್ಯ ವಿಷಯಕ್ಕೆ ಸಂಬಂಧಿಸಿದಂತೆ ಕಲಿಕೆಯ ಫಲದ ಪುನರ್ಮನನ ಹಾಗೂ ಪುನರ್ಬಲನಕ್ಕಾಗಿ ವಿವಿಧ ಪ್ರಕಾರದ ಅಭ್ಯಾಸ ಚಟುವಟಿಕೆಗಳನ್ನು ನೀಡಲಾಗಿದೆ.

**ಬಳಕೆಯ ವಿಧಾನ :**

* ಮೊದಲಿಗೆ ವಿದ್ಯಾರ್ಥಿಯು ಅಭ್ಯಾಸ ಚಟುವಟಿಕೆಯಲ್ಲಿನ ಪ್ರಶ್ನೆಗಳನ್ನು ಆಧರಿಸಿ ಪಠ್ಯ ವಿಷಯವನ್ನು ಓದಿ ಉತ್ತರ ಕಂಡುಕೊಳ್ಳಲು ಗಮನ ಸೆಳೆಯಬೇಕು.
* ಗುರುತಿಸಿದ ಉತ್ತರವನ್ನು ಹೇಳಲು ಅವಕಾಶ ನೀಡಬೇಕು.
* ಹೇಳಿದ ಉತ್ತರವನ್ನು ಅರ್ಥಪೂರ್ಣ ವಾಕ್ಯದಲ್ಲಿ ಹೇಳಲು ಮಾರ್ಗದರ್ಶನ ನೀಡಿ ಪುನರುಚ್ಚರಿಸಲು ಅವಕಾಶ ನೀಡಬೇಕು.
* ಅರ್ಥಪೂರ್ಣ ವಾಕ್ಯದಲ್ಲಿ ಹೇಳಿದ್ದನ್ನು ಅದೇ ಕ್ರಮದಲ್ಲಿ ಬರೆಯಲು ಅವಕಾಶ ನೀಡಬೇಕು. ಈ ಹಂತದಲ್ಲಿ ಬರವಣಿಗೆ ದೋಷಗಳನ್ನು ಗುರುತಿಸಿ ತಪ್ಪುಗಳನ್ನು ತಿದ್ದಿ ಸರಿಯಾದ ಕ್ರಮದಲ್ಲಿ ಬರೆಯುವ ಅಭ್ಯಾಸ ಮಾಡಿಸುವುದು.

© KTBS NOT TO BE REPUBLISHED

* ಅಂತಿಮವಾಗಿ ಪಠ್ಯ ಪುಸ್ತಕದಲ್ಲಿ ತಪ್ಪಿಲ್ಲದ ಶುದ್ಧ ಬರೆಹದಲ್ಲಿ ಬರೆಸಿ ದೃಢೀಕರಿಸುವುದು. ಇದನ್ನು ಗೃಹಕಾರ್ಯವಾಗಿ ನೀಡಬಹುದು.

**ಆ) ಭಾಷಾಭ್ಯಾಸ (ವ್ಯಾಕರಣಾಂಶ) :** ಶಿಕ್ಷಕರು ಮೊದಲಿಗೆ ಗೊತ್ತುಪಡಿಸಿರುವ ವ್ಯಾಕರಣಾಂಶವನ್ನು ಆಧರಿಸಿ ಸೂಕ್ತ ಚಟುವಟಿಕೆಯ ಮೂಲಕ ಆ ಕಲಿಕಾಂಶವನ್ನು ಅರ್ಥೈಸಬೇಕಿದೆ. ಅನಂತರ ಇಲ್ಲಿ ನೀಡಿರುವ ಅಭ್ಯಾಸದ ಚಟುವಟಿಕೆಯನ್ನು ಮೇಲೆ ಪ್ರಸ್ತಾಪಿಸಿದ ಅಭ್ಯಾಸ ಚಟುವಟಿಕೆಯ ಕ್ರಮದಲ್ಲಿ ಮಾಡಿಸಬೇಕಿದೆ.

**ಇ) ಭಾಷಾ ಚಟುವಟಿಕೆ :** ಈ ಹಂತದಲ್ಲಿ ಭಾಷಾ ಸಂಪತ್ತಿನ ಹೆಚ್ಚಳಕ್ಕಾಗಿ ಪದಗಳ ರಚನೆ, ವಿನ್ಯಾಸ, ವಿವಿಧತೆ ಮತ್ತಿತರ ಅಂಶಗಳ ಆಧಾರದಲ್ಲಿ ಚಟುವಟಿಕೆಗಳನ್ನು ಗುರುತಿಸಿ ಪಠ್ಯ ವಿಷಯವಾರು ಅಗತ್ಯಕ್ಕೆ ಅನುಗುಣವಾಗಿ ನೀಡಲಾಗಿದೆ. ಶಿಕ್ಷಕರು ಗೊತ್ತುಪಡಿಸಿರುವ ಈ ವಿಶೇಷತೆಗಳನ್ನು ಆಧರಿಸಿ ಸೂಕ್ತ ಚಟುವಟಿಕೆಯ ಮೂಲಕ ಅರ್ಥೈಸಬೇಕಿದೆ.

## ೪) ಬಳಕೆಯ ಹಂತ :

**ಸಾಮರ್ಥ್ಯ ಆಧಾರಿತ :** ಈ ಹಂತದಲ್ಲಿ ಗೊತ್ತುಪಡಿಸಿದ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಕಲಿಕೆಯ ಫಲದ ಪುನರ್ಮನನ ಹಾಗೂ ಪುನರ್ಬಲನಕ್ಕಾಗಿ ವಿವಿಧ ಪ್ರಕಾರದ ಅಭ್ಯಾಸ ಚಟುವಟಿಕೆಗಳನ್ನು ನೀಡಲಾಗಿದೆ. ಇಲ್ಲಿ ನೀಡಿರುವ ಬಹುಪಾಲು ಚಟುವಟಿಕೆಗಳು ಅನ್ವಯಕ್ಕೆ ಪೂರಕವಾಗಿವೆ.

**ಗಮನಕ್ಕೆ :** ಅಭ್ಯಾಸ ಹಂತದಲ್ಲಿ ಅಭ್ಯಾಸದ ಜೊತೆ ಜೊತೆಗೆ ಮೌಲ್ಯಮಾಪನವೂ ಸಾಗುತ್ತಿರುತ್ತದೆ. ಇದನ್ನು ನಿರಂತರ ಮೌಲ್ಯಮಾಪನ ಎಂದು ಪರಿಗಣಿಸಬಹುದಾಗಿದೆ.

## ೫) ಮೌಲ್ಯಮಾಪನ ಹಂತ :

ಮೌಲ್ಯಮಾಪನವು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಪ್ರಮುಖ ಹಂತವಾಗಿದ್ದು ಬೋಧನೆ ಮತ್ತು ಕಲಿಕೆಯ ಫಲವನ್ನು ಒರೆಹಚ್ಚಲು ಸಹಕಾರಿಯಾಗಿದೆ. ಇದರ ಮೂಲಕ ಕಲಿಕೆಯ ಫಲವನ್ನು ಅಳೆಯುವ ಮೂಲಕ ವಿದ್ಯಾರ್ಥಿಯ ಸಾಮರ್ಥ್ಯವನ್ನು ಒರೆಹಚ್ಚಬಹುದಾಗಿದೆ. ಇಲ್ಲಿ ಮೌಲ್ಯಮಾಪನಕ್ಕಾಗಿಯೇ ವಿಶೇಷವಾದ ಚಟುವಟಿಕೆಗಳನ್ನು ನೀಡಿರುವುದಿಲ್ಲ. ಆದರೆ ಅಭ್ಯಾಸ ಹಂತಕ್ಕೆಂದು ನೀಡಿರುವ ಪಠ್ಯಾಂಶ ಚಟುವಟಿಕೆ, ಭಾಷಾಭ್ಯಾಸ ಚಟುವಟಿಕೆ, ಭಾಷಾ ಚಟುವಟಿಕೆ ಮತ್ತು ಸಾಮರ್ಥ್ಯ ಆಧಾರಿತ ಚಟುವಟಿಕೆಗಳನ್ನು ಅನುಕೂಲಕ್ಕೆ ತಕ್ಕಂತೆ ಬಳಸಿ ಮೌಲ್ಯಮಾಪನ ಕಾರ್ಯವನ್ನು ಮಾಡಬೇಕಿದೆ. ಅಗತ್ಯವಿದ್ದಲ್ಲಿ ಸೂಕ್ತವಾದ ಹೆಚ್ಚುವರಿ ಚಟುವಟಿಕೆ ಮಾಡಬಹುದಾಗಿದೆ.

**ಡಾ|| ನರಸಿಂಹಮೂರ್ತಿ ಆರ್.**
**ಅಧ್ಯಕ್ಷರು**
ಸವಿ ಕನ್ನಡ – ೩
ಪಠ್ಯಪುಸ್ತಕ ರಚನಾ ಸಮಿತಿ

NOT TO BE REPUBLISHED ©KTBS

# ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ.** ರಾಜ್ಯಪಠ್ಯಪುಸ್ತಕ ಪರಿಷ್ಕರಣಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ(ರಿ)ಬೆಂಗಳೂರು–೮೫

## ಪರಿಷ್ಕರಣ ಸಮಿತಿ

**ಅಧ್ಯಕ್ಷರು**

**ಡಾ. ರಾಜಪ್ಪ ದಳವಾಯಿ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕೋಲಾರ, ಬೆಂಗಳೂರು ವಿಶ್ವವಿದ್ಯಾಲಯ.

**ಸದಸ್ಯರು**

**ಡಾ. ಜಗನ್ನಾಥ್. ಹೆಬ್ಬಾಳೆ** ಸಹ ಪ್ರಾಧ್ಯಾಪಕರು, ಕರ್ನಾಟಕ ಕಲಾ, ವಾಣಿಜ್ಯ ಪ್ರಥಮದರ್ಜೆ ಕಾಲೇಜು, ಬೀದರ್

**ಶ್ರೀ. ಅಲ್ಲಮಪ್ರಭು ಬೆಟ್ಟದೂರು,** ನಿವೃತ್ತ ಪ್ರಾಂಶುಪಾಲರು, ಅಮರ ಚೇತನ, ತವಳಗೇರಿ ಕಾಲೋನಿ, ಕಲ್ಯಾಣನಗರ, ಕೊಪ್ಪಳ

**ಶ್ರೀ. ವಿ.ರಂಗಪ್ಪಯ್ಯಹೊಳ್ಳ,** ನಿವೃತ್ತ ಕನ್ನಡ ಭಾಷಾ ಶಿಕ್ಷಕರು, ಶ್ರೀನಿವಾಸ ಚಿತ್ರಪಾಡಿ, ಸಾಲಿಗ್ರಾಮ, ಉಡುಪಿ ತಾ.

**ಶ್ರೀ. ಬಿ. ರವೀಶ್‌ಕುಮಾರ್.** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಕೇರ್ಗಳ್ಳಿ, ಮೈಸೂರು ತಾಲ್ಲೂಕು.

**ಶ್ರೀ. ಚಿಕ್ಕದೇವೇಗೌಡ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಉತ್ತರಹಳ್ಳಿ, ಬೆಂಗಳೂರು–೬೧

**ಶ್ರೀ. ತಮ್ಮಣ್ಣಗೌಡ ಹೆಚ್.ಸಿ.** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರೌಢಶಾಲೆ, ಹನುಮಂತಪುರ, ಹಾಸನ ತಾಲ್ಲೂಕು

**ಶ್ರೀಮತಿ. ಸುಶೀಲ,** ಕನ್ನಡ ಅಧ್ಯಾಪಕಿ, (ಪ್ರೌಢಶಾಲಾ ವಿಭಾಗ), ಸರ್ಕಾರಿ ಪದವಿಪೂರ್ವ ಕಾಲೇಜು, ಮದ್ದೂರು ತಾಲ್ಲೂಕು

**ಶ್ರೀ. ಬಸವರಾಜಪ್ಪ, ಎಂ,** ಕನ್ನಡ ಅಧ್ಯಾಪಕರು (ಪ್ರೌಢಶಾಲಾ ವಿಭಾಗ), ಸರ್ಕಾರಿ.ಪ.ಪೂ.ಕಾಲೇಜು, ಹೊಸನಗರ ತಾ.

**ಶ್ರೀ. ಎನ್.ಬಿ.ವೀರನಗೌಡ,** ಬಿ.ಆರ್.ಪಿ., ಕ್ಷೇತ್ರಸಮನ್ವಯಾಧಿಕಾರಿಗಳ ಕಛೇರಿ, ಶಿಕಾರಿಪುರ ತಾ, ಶಿವಮೊಗ್ಗ ಜಿಲ್ಲೆ.

**ಕಲಾವಿದರು:**

**ಶ್ರೀ. ವೆಂಕಟೇಶ್.** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು,

## ಉನ್ನತ ಪರಿಶೀಲನ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್,** ನಿವೃತ್ತ ಪ್ರಾಧ್ಯಾಪಕರು, ನಂ.೭, ೧೫ನೇ ಕ್ರಾಸ್, ಜೆ.ಪಿ.ನಗರ,ಬೆಂಗಳೂರು–೭೮

**ಡಾ. ಜಿ.ಆರ್.ತಿಪ್ಪೇಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ , ಮೈಸೂರು–೬

**ಡಾ. ಸೈಯದ್ ಜಮೀರ್‌ಉಲ್ಲಾಷರೀಫ್,** ನಿವೃತ್ತ ಪ್ರಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ

**ಡಾ. ಯಲ್ಲಪ್ಪ ಹಿಮ್ಮಡಿ,** ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಬಾಗ, ಬೆಳಗಾವಿ ಜಿಲ್ಲೆ

**ಡಾ. ಕಲಾವತಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ

**ಡಾ. ಪ್ರಶಾಂತ್ ನಾಯಕ್,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾವಸಂತ,** ಸಹಪ್ರಾಧ್ಯಾಪಕರು ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

**ಡಾ. ಸತ್ಯನಾರಾಯಣ, ಎಚ್.ಎಸ್.** ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀಮತಿ ಪ್ರೇಮಾ ಹೆಚ್. ಎಂ.,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೯

**ಶ್ರೀ ಗಂಗಣ್ಣಸ್ವಾಮಿ ಹೆಚ್. ಜಿ.,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೯

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಬಿ. ಮೋಹನ್‌ಕುಮಾರ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೯

NOT TO BE REPUBLISHED
@KTBS

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪-೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬-೧೭ ರ ಬದಲು ೨೦೧೭-೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

©KTBS NOT TO BE REPUBLISHED

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ, ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

(ಶ್ರೀಮತಿ ಪ್ರೇಮಾ ಹೆಚ್. ಎಂ.)
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೦೩

(ಪ್ರೊ. ಬರಗೂರು ರಾಮಚಂದ್ರಪ್ಪ)
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೦೩

@KTBS NOT TO BE REPUBLISHED

# ಮುನ್ನುಡಿ

೨೦೨೩-೨೪ನೇ ಸಾಲಿನಲ್ಲಿ ಜಾರಿಯಲ್ಲಿರುವ ಒಂದರಿಂದ ಹತ್ತನೇ ತರಗತಿಯವರೆಗಿನ ಕನ್ನಡ ಭಾಷಾ ಪಠ್ಯಪುಸ್ತಕಗಳು ಮತ್ತು ಆರರಿಂದ ಹತ್ತನೇ ತರಗತಿಯವರೆಗಿನ ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವುದಕ್ಕಾಗಿ ವಿಷಯ ತಜ್ಞರು, ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಿಸುವವರು ಸದಸ್ಯರಾಗಿದ್ದ ಐದು ಸಮಿತಿಗಳನ್ನು ರಚಿಸಿ, ಸರ್ಕಾರವು ಆದೇಶವನ್ನು ಹೊರಡಿಸಿತು. ಈ ಸಮಿತಿಗಳು ಮೂರು ತಿಂಗಳಿಗೂ ಹೆಚ್ಚು ಕಾಲ ಪರಿಷ್ಕರಣೆಯ ಕಾರ್ಯವನ್ನು ನೆರವೇರಿಸಿದೆ. ಪ್ರಸ್ತುತ ಪರಿಷ್ಕರಣೆಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳನ್ನು ಸ್ಪಷ್ಟಪಡಿಸಲು ಬಯಸುತ್ತೇವೆ.

೧. ರಾಷ್ಟ್ರೀಯ ಹಾಗೂ ರಾಜ್ಯ ಪಠ್ಯಕ್ರಮ ಚೌಕಟ್ಟುಗಳು ಮತ್ತು ಸಂವಿಧಾನದ ಆಶಯಗಳಿಗೆ ವ್ಯತಿರಿಕ್ತವಾಗದಂತೆ, ಪರಿಷ್ಕರಣೆಗೆ ಒಳಪಟ್ಟ ಪಠ್ಯಪುಸ್ತಕಗಳ ಮೂಲ ಸ್ವರೂಪ ಬದಲಾಗದಂತೆ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಯನ್ನಷ್ಟೇ ಗಮನದಲ್ಲಿರಿಸಿಕೊಂಡು ಈ ಪರಿಷ್ಕರಣೆಯನ್ನು ನಡೆಸಲಾಗಿದೆ.

೨. ಪ್ರಸ್ತುತ ಪರಿಷ್ಕರಣ ಸಮಿತಿಗೆ ಪೂರ್ವದಲ್ಲಿಯೇ ಶಾಲಾ ಶಿಕ್ಷಣ ಇಲಾಖೆಯು ಹೊರಡಿಸಿದ್ದ “೨೦೨೩-೨೪ನೇ ಸಾಲಿನ ಪಠ್ಯಪುಸ್ತಕಗಳ ‘ತಿದ್ದೋಲೆ’ಯನ್ನು ಸಮಿತಿಯು ಅಳವಡಿಸಿಕೊಂಡಿದೆ.

೩. ವಿವಿಧ ಸಂಘಟನೆಗಳು, ವ್ಯಕ್ತಿಗಳು ಹಾಗೂ ಸರ್ಕಾರದ ಇಲಾಖೆಗಳು ಪಠ್ಯಪುಸ್ತಕದಲ್ಲಿ ನಿರ್ದಿಷ್ಟ ವಿಷಯಾಂಶವನ್ನು ಅಳವಡಿಸುವ/ಕೈಬಿಡುವ/ಪರಿಷ್ಕರಿಸುವ ಕುರಿತು ಮಾಡಿದ ಎಲ್ಲಾ ಮನವಿಗಳನ್ನು ಪರಿಶೀಲಿಸಿ ಸೂಕ್ತವೆನಿಸಿದ ಸಲಹೆಗಳನ್ನು ಅಳವಡಿಸಿಕೊಳ್ಳಲಾಗಿದೆ.

೪. ವಿವಿಧ ವ್ಯಕ್ತಿಗಳು, ಸಂಘಟನೆಗಳು ಸ್ವಯಂ ಪ್ರೇರಣೆಯಿಂದ ಅಪಾರ ಶ್ರಮ ಹಾಗೂ ವ್ಯವಧಾನದಿಂದ ಪಠ್ಯಪುಸ್ತಕಗಳಲ್ಲಿರುವ ವಿಸಂಗತಿ, ಆಶಯ ದೋಷ ಹಾಗೂ ಅಪಕಲ್ಪನೆಗಳನ್ನು ಜಾಲತಾಣಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ವ್ಯಾಪಕವಾಗಿ ಚರ್ಚಿಸಿದ್ದವು. ಈ ಬಹುತೇಕ ಎಲ್ಲಾ ಬರೆಹಗಳನ್ನು ಗಮನಿಸಿ, ಚರ್ಚಿಸಿ ಸೂಕ್ತ ಪರಿಷ್ಕರಣೆಯನ್ನು ಮಾಡಲಾಗಿದೆ.

೫. ನಿರ್ದಿಷ್ಟ ಪಠ್ಯಗಳನ್ನು ಬೋಧಿಸುವ ಶಿಕ್ಷಕರಿಂದ ಪಡೆದುಕೊಂಡ ಅಭಿಪ್ರಾಯಗಳು ಸಹ ಪ್ರಸ್ತುತ ಪರಿಷ್ಕರಣೆಯಲ್ಲಿ ಅಪಾರ ನೆರವು ನೀಡಿವೆ.

ವಿಷಯಾಂಶಗಳಿಗೆ ಸಂಬಂಧಿಸಿದ ಪರಿಷ್ಕರಣೆಯೊಂದಿಗೆ ಪಠ್ಯಪುಸ್ತಕಗಳಲ್ಲಿರುವ ಎಲ್ಲಾ ಬಗೆಯ ಅಂಕಿ ಅಂಶಗಳು, ಮಾಹಿತಿಗಳು ಮತ್ತು ನಕ್ಷೆಗಳನ್ನು ಈ ಪರಿಷ್ಕರಣೆಯ ಹೊತ್ತಿಗೆ ಲಭ್ಯವಿರುವ ಮಾಹಿತಿಗಳನ್ನು ಒಳಗೊಳ್ಳುವಂತೆ ನವೀಕರಿಸಲಾಗಿದೆ.

ಮಕ್ಕಳ ಪಠ್ಯಪುಸ್ತಕದ ಹೊರೆ ಕಡಿಮೆ ಮಾಡುವ ನಿಟ್ಟಿನಲ್ಲಿ ಎಲ್ಲಾ ಪಠ್ಯಪುಸ್ತಕಗಳನ್ನು ಪ್ರಸ್ತುತ ಶೈಕ್ಷಣಿಕ ವರ್ಷದಿಂದ ಎರಡು ಸಂಪುಟಗಳಾಗಿ ವಿಭಾಗಿಸುವ ಸರ್ಕಾರದ ನಿರ್ಣಯಕ್ಕೆ ಅನುಸಾರವಾಗಿ, ಎರಡೂ ಸಂಪುಟಗಳಲ್ಲಿನ ಕಲಿಕಾಂಶಗಳು/ಪಾಠಗಳು ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗುವಂತೆ ವ್ಯವಸ್ಥಿತವಾಗಿ ಅಳವಡಿಸಲಾಗಿದೆ.

ಈ ಪರಿಷ್ಕರಣಾ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಕ್ಲುಪ್ತವಾಗಿ ಕಾರ್ಯನಿರ್ವಹಿಸಿದ ಐದೂ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಅದರಲ್ಲೂ ಪಠ್ಯ ಬೋಧನೆಯ ತಮ್ಮ ಅನುಭವವನ್ನು ಪರಿಷ್ಕರಣೆಯಲ್ಲಿ ಧಾರೆಯೆರೆದ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಪಠ್ಯಪುಸ್ತಕಗಳ ಕುರಿತು ತುಂಬ ಕಳಕಳಿಯಿಂದ ಗಂಭೀರ ಅಧ್ಯಯನ ನಡೆಸಿ ಬರೆಹಗಳನ್ನು ಪ್ರಕಟಿಸಿದ ವ್ಯಕ್ತಿಗಳು, ಸಂಘಟನೆಗಳು ಮಾಡಿದ ಶೋಧಗಳು ಪ್ರಸ್ತುತ ಪರಿಷ್ಕರಣೆಯ ಕಾರ್ಯಕ್ಕೆ ತುಂಬಾ ಸಹಾಯ ಮಾಡಿವೆ. ಅಂತಹ ಎಲ್ಲಾ ಸ್ಪಂದನೆಗಳಿಗೂ ನಾವು ಕೃತಜ್ಞರಾಗಿದ್ದೇವೆ.

ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದ ಇಲಾಖಾ ಅಧಿಕಾರಿಗಳು ಮತ್ತು ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳಿಗೂ, ಸಿಬ್ಬಂದಿಗಳಿಗೂ ವಂದನೆಗಳು.

**ಶ್ರೀಮತಿ ಪ್ರೇಮಾ ಹೆಚ್.ಎಂ.**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ.)

**ಡಾ ಎಂ. ಜಿ. ಹೆಗಡೆ**
ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ, ಬೆಂಗಳೂರು

©KTBS NOT TO BE REPUBLISHED

# ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ–2024

**ಮುಖ್ಯ ಸಂಯೋಜಕರು :**

**ಡಾ. ಮಂಜುನಾಥ ಜಿ. ಹೆಗಡೆ,** 'ಅಹಲ್ಯ', ಚಿತ್ರಗಿ ಗ್ರಾಮ, ಕುಮಟಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

**ಅಧ್ಯಕ್ಷರು:**

**ಡಾ. ಅಂಜನಪ್ಪ,** ಪ್ರಾಧ್ಯಾಪಕರು, ಕನ್ನಡ ವಿಭಾಗ, ತುಂಗಾ ಮಹಾವಿದ್ಯಾಲಯ, ಆನಂದಗಿರಿ, ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.

**ಸದಸ್ಯರು:**

**ಡಾ. ಬಿ.ಸಿ. ನಾಗೇಂದ್ರ ಕುಮಾರ್,** ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು, ಡಾ:ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು.

**ಶ್ರೀ ಚಿಕ್ಕದೇವೇಗೌಡ,** ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರೌಢಶಾಲೆ, ಅಗರ, ಕನಕಪುರ ರಸ್ತೆ, ಬೆಂಗಳೂರು.

**ಶ್ರೀ ಅಜಮೀರ ನಂದಾಪುರ,** ಮುಖ್ಯೋಪಾಧ್ಯಾಯರು, ಜನತಾ ಸೇವಾ ಅನುದಾನಿತ ಕನ್ನಡ ಮಾಧ್ಯಮ ಪ್ರೌಢ ಶಾಲೆ, ಗಂಗಾವತಿ, ಕೊಪ್ಪಳ ಜಿಲ್ಲೆ.

**ಶ್ರೀ ನರಸಿಂಹಮೂರ್ತಿ ಬಿ.ಕೆ.,** ಸ.ಶಿ., ಕರ್ನಾಟಕ ಪಬ್ಲಿಕ್ ಶಾಲೆ, ಸಾರಕ್ಕಿ, ಬೆಂಗಳೂರು.

**ಶ್ರೀಮತಿ ಸುಶೀಲಾ,** ಸ.ಶಿ., ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ), ಮದ್ದೂರು, ಮಂಡ್ಯ ಜಿಲ್ಲೆ.

**ಶ್ರೀ ವಿಶ್ವನಾಥ್ ಜಿ.ಎಸ್.,** ಸ.ಶಿ., ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಿಂಧಿ, ನಗರ್ತಪೇಟೆ, ಬೆಂಗಳೂರು.

**ಶ್ರೀಮತಿ ನೇತ್ರಾವತಿ ಎಂ. ಎಸ್.,** ಸ.ಶಿ., ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಭುವನೇಶ್ವರಿನಗರ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀಮತಿ ಪ್ರೇಮಾ ಹೆಚ್.ಎಂ.,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೩.

**ಶ್ರೀ ಗಂಗಣ್ಣಸ್ವಾಮಿ ಹೆಚ್. ಜಿ.,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೩.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಬಿ. ಮೋಹನ್‌ಕುಮಾರ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು–೦೩.

@KTBS NOT TO BE REPUBLISHED

X6D4P9

# ಪರಿವಿಡಿ


| ಸಂಖ್ಯೆ | ಗದ್ಯ – ಪದ್ಯಗಳು | ಕೃತಿಕಾರರ ಹೆಸರು | ಪುಟ ಸಂಖ್ಯೆ |
|---|---|---|---|
| ೧. | ತುತ್ತೂರಿ (ಪದ್ಯ) | ಜಿ.ಪಿ. ರಾಜರತ್ನಂ | ೦೧ |
| ೨. | ನನ್ನ ಕನಸು | ಸಮಿತಿ ರಚನೆ | ೦೬ |
| ೩. | ಸ್ವಾತಂತ್ರ್ಯ ದಿನಾಚರಣೆ | ಸಮಿತಿ ರಚನೆ | ೧೫ |
| ೪. | ಕಂದ (ಪದ್ಯ) | ಜನಪದ | ೨೫ |
| ೫. | ಚಿಗುರು | ಸಮಿತಿ ರಚನೆ | ೨೯ |
| ೬. | ಈಸೂರ ಸ್ವಗತ | ಸಮಿತಿ ರಚನೆ | ೩೮ |
| ೭. | ಪ್ರಾಮಾಣಿಕ ಬಾಲಕ | ಸಮಿತಿ ರಚನೆ | ೪೮ |
| ೮. | ಸಂಕ್ರಾಂತಿ (ಪದ್ಯ) | ಎಚ್.ಎಸ್. ವೆಂಕಟೇಶಮೂರ್ತಿ | ೫೫ |


@KTBS
NOT TO BE REPUBLISHED

# ಪಾಠ ೧ ತುತ್ತೂರಿ (ಪದ್ಯ)

I4V4R4

**ಸಾಮರ್ಥ್ಯ :** ಪದ್ಯವನ್ನು ಓದಿದ ಮೇಲೆ ಯಾರು? ಯಾವಾಗ? ಎಲ್ಲಿ? ಏನು? ಏಕೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುವುದು.

**ಪ್ರವೇಶ :** ಸಂತೋಷ, ದುಃಖ, ನೋವು ಈ ಅನುಭವಗಳು ನಿನಗೂ ಆಗಿರಬಹುದಲ್ಲವೇ? ನಿನ್ನ ಒಂದು ಅನುಭವವನ್ನು ನೆನೆಪಿಸಿಕೊ. ಅದಕ್ಕೆ ಒಂದು ಕಾರಣವೂ ಇರಬೇಕಲ್ಲವೇ? ಈಗ ಇಲ್ಲಿನ ಘಟನೆಯನ್ನು ಗಮನಿಸು. ಸಂತೋಷ ಹಾಗೂ ದುಃಖಕ್ಕೆ ಕಾರಣವಾದ ಸಂದರ್ಭಗಳನ್ನು ಗುರುತಿಸು.




ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮಪದನಿಸ ಊದಿದನು
ಸನಿದಪ ಮಗರಿಸ ಊದಿದನು

ತನಗೇ ತುತ್ತೂರಿ ಇದೆಯೆಂದ
ಬೇರಾರಿಗು ಅದು ಇಲ್ಲೆಂದ
ಕಸ್ತೂರಿ ನಡೆದನು ಬೀದಿಯಲಿ
ಜಂಭದ ಕೋಳಿಯ ರೀತಿಯಲಿ

©KTBS NOT TO BE REPUBLISHED

ತುತ್ತೂರಿಯೂದುತ ಕೊಳದ ಬಳಿ
ನಡೆದನು ಕಸ್ತೂರಿ ಸಂಜೆಯಲಿ
ಜಾರಿತು ನೀರಿಗೆ ತುತ್ತೂರಿ
ಗಂಟಲು ಕಟ್ಟಿತು ನೀರೂರಿ



ಸರಿಗಮ ಊದಲು ನೋಡಿದನು
ಗಗಗಗ ಸದ್ದನು ಮಾಡಿದನು
ಬಣ್ಣವು ನೀರಿನ ಪಾಲಾಯ್ತು
ಬಣ್ಣದ ತುತ್ತೂರಿ ಬೋಳಾಯ್ತು

ಬಣ್ಣದ ತುತ್ತೂರಿ ಹಾಳಾಯ್ತು
ಜಂಭದ ಕೋಳಿಗೆ ಗೋಳಾಯ್ತು

– ಜಿ.ಪಿ. ರಾಜರತ್ನಂ

**ಪದಗಳ ಅರ್ಥ :**

ಕಾಸು – ಹಣ; ಜಂಭ – ಅಹಂಕಾರ; ಹಾಳಾಗು – ಕೆಟ್ಟುಹೋಗು;
ಸದ್ದು – ಸಪ್ಪಳ; ಸಂಜೆ – ಸಾಯಂಕಾಲ.

**ಟಿಪ್ಪಣಿ :**

ತಗಡು – ತೆಳುವಾದ ಲೋಹದ ಹಾಳೆ

ಕೊಳ – ನೀರಿನ ತಾಣ, ಕೆರೆ

ತುತ್ತೂರಿ – ಊದುವ ವಾದ್ಯ

ಸರಿಗಮಪದನಿ – ಸಂಗೀತದ ಏಳು ಸ್ವರಗಳು

## ಅಭ್ಯಾಸ

**ಅ) ಒಂದು ವಾಕ್ಯದಲ್ಲಿ ಉತ್ತರಿಸು.**

೧. ಕಸ್ತೂರಿಯು ಏನನ್ನು ಕೊಂಡನು?

________________________________________

೨. ಕಸ್ತೂರಿ ಎಲ್ಲಿ ತುತ್ತೂರಿ ಊದಿದನು?

________________________________________

೩. ಕಸ್ತೂರಿಯು ತುತ್ತೂರಿಯನ್ನು ಯಾವಾಗ ಊದಿದನು?

________________________________________

೪. ಜಂಭದ ಕೋಳಿ ಯಾರು?

________________________________________

೫. ಜಂಭದ ಕೋಳಿಗೆ ಏಕೆ ಗೋಳಾಯಿತು?

________________________________________

೬. ತುತ್ತೂರಿ ಏನಾಯಿತು?

________________________________________

@KTBS NOT TO BE REPUBLISHED

## ಆ) ಈ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳವನ್ನು ಸೂಕ್ತ ಪದದಿಂದ ತುಂಬು.

೧. ಬಣ್ಣದ ತಗಡಿನ ______________

೨. ಕಸ್ತೂರಿ ನಡೆದನು ______________

೩. ಜಾರಿತು ನೀರಿಗೆ ______________

೪. ಬಣ್ಣದ ತುತ್ತೂರಿ ______________

## ಇ) ಈ ಕಥೆಯನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.

ಬೀರೂರಿನಲ್ಲಿ ರಾಮಣ್ಣ ಎಂಬ ಕಟ್ಟಿಗೆ ವ್ಯಾಪಾರಿಯು ವಾಸಿಸುತ್ತಿದ್ದನು. ಅವನು ತುಂಬಾ ಬಡವನಾಗಿದ್ದನು. ಅವನು ಪ್ರತಿ ದಿನ ಬೆಳಗ್ಗೆ ಕಾಡಿಗೆ ಹೋಗಿ ಒಣ ಮರವನ್ನು ಕಡಿದು ತರುತ್ತಿದ್ದನು. ಪೇಟೆಯಲ್ಲಿ ಕಟ್ಟಿಗೆ ಮಾರಿ ಜೀವನ ನಡೆಸುತ್ತಿದ್ದನು. ಅವನು ಎಂದೂ ಹಸಿ ಮರವನ್ನು ಕಡಿದವನಲ್ಲ. ಇದಕ್ಕಾಗಿ ಇವನಿಗೆ ವನದೇವತೆಯು ಅಕ್ಷಯ ಪಾತ್ರೆಯನ್ನು ನೀಡಿದಳು. ಇದರಿಂದ ರಾಮಣ್ಣ ಶ್ರೀಮಂತನಾದನು.

@KTBS NOT TO BE REPUBLISHED

೧. ರಾಮಣ್ಣ ಯಾರು?

______________________________

೨. ರಾಮಣ್ಣ ಎಲ್ಲಿ ವಾಸಿಸುತ್ತಿದ್ದನು?

______________________________

೩. ರಾಮಣ್ಣ ಯಾವಾಗ ಕಾಡಿಗೆ ಹೋಗುತ್ತಿದ್ದನು?

______________________________

೪. ವನದೇವತೆಯು ರಾಮಣ್ಣನಿಗೆ ಅಕ್ಷಯ ಪಾತ್ರೆಯನ್ನು ಏಕೆ ನೀಡಿದಳು?

______________________________

______________________________

# ಭಾಷಾಭ್ಯಾಸ

## ಕನ್ನಡ ವರ್ಣಮಾಲೆ

೧. ಸ್ವರಾಕ್ಷರಗಳು

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

೨. ಯೋಗವಾಹಗಳು

ಅಂ ಅಃ

೩. ವ್ಯಂಜನಾಕ್ಷರಗಳು

| | | | | | | | | |
|---|---|---|---|---|---|---|---|---|
| ಕ | ಖ | ಗ | ಘ | ಙ | | | | |
| ಚ | ಛ | ಜ | ಝ | ಞ | | | | |
| ಟ | ಠ | ಡ | ಢ | ಣ | | | | |
| ತ | ಥ | ದ | ಧ | ನ | | | | |
| ಪ | ಫ | ಬ | ಭ | ಮ | | | | |
| ಯ | ರ | ಲ | ವ | ಶ | ಷ | ಸ | ಹ | ಳ |

@KTBS
NOT TO BE REPUBLISHED

## ಅಭ್ಯಾಸ

೧. ಕನ್ನಡ ವರ್ಣಮಾಲೆಯಲ್ಲಿ ಎಷ್ಟು ಅಕ್ಷರಗಳಿವೆ?

______________________________

೨. ಕನ್ನಡ ವರ್ಣಮಾಲೆಯ ಅಕ್ಷರಗಳನ್ನು ಎಷ್ಟು ಗುಂಪುಗಳಾಗಿ ವಿಂಗಡಿಸಿದ್ದಾರೆ?

______________________________

೩. ವ್ಯಂಜನಾಕ್ಷರಗಳನ್ನು ಬರೆ.

೪. ಈ ಕೆಳಗೆ ಗುಂಪಿನಲ್ಲಿರುವ ಅಕ್ಷರಗಳಲ್ಲಿ ಸ್ವರಗಳನ್ನು ಆರಿಸಿ ಬರೆ.

| | |
|---|---|
| ಕ ಗ ಎ ಬ ಅ ಚ<br>ಠ ಝ ಇ ಈ ಉ ರ<br>ಒ ಯ ಓ ಐ<br>ಆ ವ ಶ ಟ ಊ ಏ<br>ಲ ಸ ಔ ಣ | ____ ____ ____ ____ ____<br>____ ____ ____ ____ ____<br>____ ____ ____ |

@KTBS NOT TO BE REPUBLISHED

## ಭಾಷಾ ಚಟುವಟಿಕೆ

**ಅ) 'ಅ' ಪಟ್ಟಿಯಲ್ಲಿನ ಶಬ್ದಗಳಲ್ಲಿನ ಬಿಡಿಸಿದ ರೂಪವನ್ನು 'ಬ' ಪಟ್ಟಿಯಲ್ಲಿನ ಶಬ್ದಗಳಿಗೆ ಸರಿ ಹೊಂದಿಸಿ ಬರೆ.**

| ಅ | ಬ | |
|---|---|---|
| ೧. ಪಾಲು + ಆಯ್ತು | ಗೋಳಾಯ್ತು | __________ |
| ೨. ಬೋಳು + ಆಯ್ತು | ಹಾಳಾಯ್ತು | __________ |
| ೩. ಹಾಳು + ಆಯ್ತು | ಪಾಲಾಯ್ತು | __________ |
| ೪. ಗೋಳು + ಆಯ್ತು | ಬೋಳಾಯ್ತು | __________ |

ಆ) **ಈ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಹುಡುಕಿ ಬರೆ.**

ಮಾದರಿ : ಹಾಳಾಯ್ತು – ಗೋಳಾಯ್ತು

೧. ______________ ______________

೨. ______________ ______________

೩. ______________ ______________

೪. ______________ ______________

ಇ) **ನೀಡಿರುವ ಪ್ರಾಸ ಪದಗಳಿಂದ ಸರಿಯಾದುದನ್ನು ಆರಿಸಿ ಬಿಟ್ಟ ಸ್ಥಳವನ್ನು ತುಂಬಿಸಿ ಬರೆ. (ನೀರು, ಹೆಕ್ಕಿ, ಬಾಯಿ, ಕಣ್ಣು)**

ನೋಡಲು ಬೇಕು ___________
ತಿನ್ನಲು ಬೇಕು ಹಣ್ಣು

ಹಾರುತ ಬಂತು ಹಕ್ಕಿ
ತಿಂದಿತು ಕಾಳನು ___________

ಅನ್ನಕೆ ಬೇಕು ಸಾರು
ಕುಡಿಯಲು ಬೇಕು ___________

ಬೌ ಬೌ ಬೊಗಳಿತು ನಾಯಿ
ತೆರೆಯಿತು ತನ್ನಯ ___________

@KTBS NOT TO BE REPUBLISHED

## ಚಟುವಟಿಕೆ

ಅ) ತೆಂಗಿನ ಗರಿ ಅಥವಾ ಎಲೆಯನ್ನು ಬಳಸಿ ತುತ್ತೂರಿಯನ್ನು ಸಿದ್ಧಪಡಿಸಿ ಊದಲು ಬಳಸು.



ಪಾಠ ೨

# ನನ್ನ ಕನಸು

– ಸಮಿತಿ ರಚನೆ

F4X9F7

**ಸಾಮರ್ಥ್ಯ:** ಸರಿಯಾದ ಉಚ್ಚಾರದೊಂದಿಗೆ ಮಾತನಾಡುವುದು. ಸರಿಯಾದ ಸ್ವರಭಾರ ಮತ್ತು ಅಭಿನಯದ ಮೂಲಕ ಗೊತ್ತಿರುವ ಸರಳ ಕಥೆಗಳನ್ನು ಹೇಳುವುದು.

**ಪ್ರವೇಶ :** ನಾವು ಕನಸನ್ನು ಕಾಣುತ್ತೇವೆ ಅಲ್ಲವೇ? ಹಾಗಿದ್ದರೆ ನೀನು ಕಂಡ ಕನಸೊಂದನ್ನು ನೆನಪು ಮಾಡಿಕೊ. ಇಲ್ಲಿ ವಿದ್ಯಾರ್ಥಿಯೊಬ್ಬ ಕಂಡ ಕನಸಿದೆ. ಅದು ಏನಿರಬಹುದು ಎಂಬ ಕುತೂಹಲವೇ? ಹಾಗಿದ್ದರೆ ಅದನ್ನು ತಿಳಿದು ಗೆಳೆಯರೊಂದಿಗೆ ಹಂಚಿಕೊ.

ಒಂದು ದಟ್ಟವಾದ ಕಾಡು. ವಿಶಾಲ ಪ್ರದೇಶದಲ್ಲಿ ಬೆಳೆದಿರುವ ಎತ್ತರವಾದ ಮರ ಗಿಡಗಳು, ಮರಗಳನ್ನು ಬಳಸಿ ಮುಗಿಲೆತ್ತರಕ್ಕೆ ಹಬ್ಬುತ್ತಿರುವ ಬಳ್ಳಿಗಳು, ಹಸಿರಿನ ನಡುವೆ ಬಣ್ಣದ ಚಿತ್ತಾರ ಮೂಡಿಸಿರುವ ಹೂ, ಹಣ್ಣುಗಳು, ದುಂಬಿಯ ಝೇಂಕಾರ, ಪಕ್ಷಿಗಳ ಕಲರವ, ನಡುವೆ ತೇಲಿ ಬರುತ್ತಿರುವ ಕೋಗಿಲೆಯ ಧ್ವನಿ, ಜುಳು ಜುಳು ಹರಿಯುತ್ತಿರುವ ಝರಿಯ ನಿನಾದ. ಇಂತಹ ಸುಂದರ ಪರಿಸರವು ಪ್ರಾಣಿ ಪಕ್ಷಿಗಳಿಗೆ ನೆಮ್ಮದಿಯ ಆಶ್ರಯ ತಾಣವಾಗಿತ್ತು.



ಒಂದು ಮುಂಜಾನೆ. ಕಾಡಿನ ಕಲರವದ ನಡುವೆ ಹೆಜ್ಜೆಯ ಸಪ್ಪಳವು ಪ್ರಾಣಿಗಳ ಕಿವಿಯನ್ನು ನಿಮಿರುವಂತೆ ಮಾಡಿತು. ಏನೆಂದು ನೋಡುವಷ್ಟರಲ್ಲಿ ಮರದ ಬುಡಕ್ಕೆ ಬಿದ್ದ

ಹೊಡೆತದಿಂದ ಪಕ್ಷಿಗಳು ಚೀರುತ್ತಾ ಹಾರಿದವು. ಸನಿಹದಲ್ಲಿದ್ದ ಪ್ರಾಣಿಗಳು ಭಯಮಿಶ್ರಿತ ಕುತೂಹಲದಿಂದ "ಯಾರದು?" ಎಂದು ತಿರುಗಿ ನೋಡಿದವು. ಮಾನವನನ್ನು ಕಂಡು ಸಿಟ್ಟುಗೊಂಡು ವಾದಕ್ಕೆ ಮುಂದಾದವು.

**ಮೊಲ** : ಏ ಮಾನವ, ನಿನಗಿನ್ನೂ ಬುದ್ಧಿ ಬರಲಿಲ್ಲವೇ? ಅತಿವೃಷ್ಟಿ ಹಾಗೂ ಅನಾವೃಷ್ಟಿಯಿಂದ ಸಾವು ನೋವುಗಳೂ ಸಂಭವಿಸಿವೆ. ಆದರೂ ಕಾಡಿನ ನಾಶಕ್ಕೆ ಮುಂದಾಗಿರುವೆಯಲ್ಲಾ. ಛೀ ಅವಿವೇಕಿ!

**ಮಾನವ** : ಅಂಜುಬುರುಕ ಪ್ರಾಣಿಯೇ! ನೀನು ಮಾನವನನ್ನು ಅವಿವೇಕಿ ಎನ್ನುವೆಯಾ? ನಮ್ಮ ಬುದ್ಧಿವಂತಿಕೆ ನಿನಗೇನು ಗೊತ್ತು?
*(ಕೊಡಲಿಯನ್ನು ಹೆಗಲ ಮೇಲಿಟ್ಟು ಗತ್ತಿನಿಂದ ಹೇಳಿದನು)*

**ಜಿಂಕೆ** : ಹೇಳಪ್ಪ ನಿಮ್ಮ ಜಾಣತನವನ್ನು ... ನಾವೂ ಸ್ವಲ್ಪ ತಿಳಿಯುತ್ತೇವೆ.

**ಮಾನವ** : ಆಕಾಶದಲ್ಲಿ ಹಾರುವ ವಿಮಾನ, ನೀರಿನ ಮೇಲೆ ಚಲಿಸುವ ದೋಣಿ, ಹಡಗುಗಳನ್ನು ಸೃಷ್ಟಿಸಿದ್ದೇವೆ. ಇದಿಷ್ಟು ಸಾಕಲ್ಲವೇ ನಮ್ಮ ಬುದ್ಧಿವಂತಿಕೆಗೆ?

**ನರಿ** : (ಕತ್ತನ್ನು ಮೇಲೆತ್ತಿ ಮೂದಲಿಸುತ್ತಾ) ಪಕ್ಷಿಯನ್ನು ನೋಡಿ ವಿಮಾನವನ್ನು, ಜಲಚರಗಳನ್ನು ನೋಡಿ ದೋಣಿ, ಹಡಗುಗಳನ್ನು ನಿರ್ಮಿಸಿರುವೆ. ಇದರಲ್ಲಿ ನಿಮ್ಮ ಸ್ವಂತಿಕೆ ಏನು?

**ಮಾನವ** : *(ನರಿಯ ಮಾತಿಗೆ ಮಂಕಾದ ಮಾನವ, ತೋರ್ಪಡಿಸಿಕೊಳ್ಳದೆ)* ಸುಂದರವಾಗಿ ಕಾಣಲು ಉಡುಗೆ ತೊಡುಗೆಗಳನ್ನು ಸೃಷ್ಟಿಸಿದ್ದೇವೆ. ನಿಮಗಿದು ತಿಳಿಯದೇ?

**ಜಿಂಕೆ** : ಮೊದಲಿಗೆ ನಮ್ಮ ಚರ್ಮವನ್ನೇ ಧರಿಸುತ್ತಿದ್ದುದನ್ನು ನೆನಪಿಸಿಕೋ. ನಿಮ್ಮ ಬಟ್ಟೆಯಲ್ಲೇನು ವಿಶೇಷ? ಪ್ರಾಣಿ, ಪಕ್ಷಿ, ಕೀಟಗಳ ಮೈಬಣ್ಣಕ್ಕೆ ಮನಸೋತು ನಮ್ಮಂತೆ ಸುಂದರವಾಗಿ ಕಾಣಲು ಬಟ್ಟೆಗಳನ್ನು ಸಿದ್ಧಪಡಿಸಿರುವೆ. ಸಹಜ ಸೌಂದರ್ಯ ನಮ್ಮದು, ತಿಳಿಯಿತೇ?

**ಕೋತಿ** : *(ಕೊಂಬೆಯನ್ನು ಹಿಡಿದು ಜೋತಾಡುತ್ತ)* ಜಿಂಕೆಯ ಕಣ್ಣಿನಂತಹ ಕಣ್ಣು, ನವಿಲಿನ ನಡಿಗೆಯಂತಹ ನಡಿಗೆ, ಕೋಗಿಲೆಯ ದನಿಯಂತಹ ದನಿ ಇರಬೇಕು ಎಂದೆಲ್ಲ ಹೇಳುವ ನೀವು ಸುಂದರವೋ ಅಥವಾ ನಾವು ಸುಂದರವೋ?

© KTBS NOT TO BE REPUBLISHED

**ಕಾಡು ಹಂದಿ:** (ಗುಟುರು ಹಾಕುತ್ತಾ) ಅಗತ್ಯ ವಸ್ತುಗಳನ್ನು ಉತ್ಪಾದಿಸುವ ನಿಮ್ಮ ಕಾರ್ಖಾನೆಗಳು ಹೊಗೆ ಮತ್ತು ಕಲ್ಮಶವನ್ನು ಹೊರ ಹಾಕುತ್ತವೆ. ಇದರಿಂದ ಗಾಳಿ, ಮಣ್ಣು, ನೀರು ಮಲಿನವಾಗುತ್ತವೆ. ಇದೇಕೆ ನಿನಗೆ ತಿಳಿಯುತ್ತಿಲ್ಲ?

**ಮಾನವ** : (ಪ್ರಾಣಿಗಳ ಒಗ್ಗಟ್ಟು ಮತ್ತು ಬುದ್ಧಿವಂತಿಕೆಯನ್ನು ಕಂಡ ಮಾನವನಿಗೆ ತಾನು ಸೋಲುತ್ತಿರುವುದು ಮನವರಿಕೆಯಾಯಿತು. ಆದರೂ ತೋರ್ಪಡಿಸಿಕೊಳ್ಳದೆ) ಬಯಲಿನಲ್ಲಿ ವಾಸ ಮಾಡುವ ನಿಮಗೇನು ಗೊತ್ತು ನಾವು ಕಟ್ಟಿರುವ ಸುಂದರವಾದ ಮನೆಗಳ ಬಗ್ಗೆ. ಬಂದು ನೋಡಿ. ನಮ್ಮ ಬುದ್ಧಿವಂತಿಕೆ ತಿಳಿಯುತ್ತದೆ.

**ಕಾಗೆ** : ಗೀಜಗನ ಗೂಡು, ಜೇನುಗೂಡು, ಗೆದ್ದಲುಹುಳು ಕಟ್ಟುವ ಹುತ್ತಗಳು ಎಷ್ಟು ಸುಂದರ, ಸುರಕ್ಷಿತ! ಕಸದಿಂದ ಮಾಡಿರುವ ನಮ್ಮ ಸಾಧನೆಯ ಮುಂದೆ ಪ್ರಕೃತಿಯ ನಾಶದ ನಿಮ್ಮ ಸಾಧನೆ ಶೂನ್ಯ.

*(ಪ್ರಾಣಿ ಪಕ್ಷಿಗಳ ಬುದ್ಧಿವಂತಿಕೆಗೆ ಮಾನವ ಬೆರಗಾದ)*

**ಮಾನವ** : (ಆಶ್ಚರ್ಯದಿಂದ) ನಿಮಗೆ ಇದೆಲ್ಲ ಹೇಗೆ ತಿಳಿಯಿತು?

**ಕೊಕ್ಕರೆ** : (ಬಳುಕುತ್ತಾ) ನಮ್ಮಲ್ಲಿ ಕೆಲವರು ವರ್ಷದಲ್ಲಿ ಕೆಲವು ತಿಂಗಳು ದೇಶ ವಿದೇಶಗಳಿಗೆ ವಲಸೆ ಹೋಗುತ್ತೇವೆ. ಅಲ್ಲಿ ಗೆಳೆಯರೊಂದಿಗೆ ಚರ್ಚಿಸುತ್ತೇವೆ. ನಿನಗಿದು ತಿಳಿಯದೇ?

**ಮರ** : (ಸಹನೆಯಿಂದ ಆಲಿಸುತ್ತಿದ್ದ ಮರವು) ಏ ಮಾನವ, ನೀನು ಏನೇ ಮಾಡಿದ್ದರೂ ಅಥವಾ ಮುಂದೆ ಮಾಡಿದರೂ ಅದು ಈ ಪ್ರಕೃತಿಯ ಪ್ರಭಾವದಿಂದ. ಪ್ರಕೃತಿಯ ಅಂಗವಾದ ಕಾಡಿನ ನಾಶದಿಂದ ನಿನ್ನ ಸಂತತಿಯ ನಾಶವೆಂಬುದನ್ನು ಮೊದಲು ಅರಿತುಕೋ. ಕಾಡಿನ ಸಂರಕ್ಷಣೆಗೆ ಮುಂದಾಗು. ಸಾಲುಮರದ ತಿಮ್ಮಕ್ಕನನ್ನು ನೋಡಿ ಕಲಿ. ನೀನು ಬದುಕುವ ಜೊತೆಗೆ ಪ್ರಕೃತಿಯ ಉಳಿವಿಗೆ ನಿನ್ನ ಬುದ್ಧಿವಂತಿಕೆಯನ್ನು ತೋರಿಸು. ಏಳು ಎಚ್ಚರಗೊಳ್ಳು, ಸಮಯ ಮೀರುವ ಮುನ್ನ ಎದ್ದೇಳು.

©KTBS NOT TO BE REPUBLISHED



**ಅಮ್ಮ** : ರಾಜು, ಏಳೋ, ಶಾಲೆಗೆ ತಡವಾಗುತ್ತೆ.

(ಏಳು, ಎದ್ದೇಳು ಎಂಬ ಕೂಗಿಗೆ ರಾಜು ಎಚ್ಚರಗೊಂಡ, ಹಾಸಿಗೆಯ ಮೇಲೆ ಕುಳಿತ)

**ರಾಜು** : ಅಮ್ಮ, ಅಮ್ಮಾ, ನನಗೆ ಕನಸು ಬಿದ್ದಿತ್ತು. ಎಂಥಾ ಕನಸು ಗೊತ್ತಾ? ಕಾಡಿನಲ್ಲಿ ಪ್ರಾಣಿಗಳೆಲ್ಲ ಸೇರಿ ಮರ ಕಡಿಯಲು ಹೋದ ಮನುಷ್ಯನ ಮನಃಪರಿವರ್ತನೆ ಮಾಡಿದವು. ಅಲ್ಲಿ ಎಷ್ಟೆಲ್ಲ ಪ್ರಾಣಿಗಳಿದ್ದವು ಗೊತ್ತಾ?

**ಅಮ್ಮ** : ಹೌದಾ, ನಿಜವಾಗಿಯೂ ಇದು ಒಳ್ಳೆಯ ಕನಸೇ! ರಾಜು, ನಿನ್ನೆ ರಾತ್ರಿ 'ಕಾಡಿನ ಕಥೆ' ಓದಿ ಮಲಗಿದೆಯಲ್ಲಾ, ಅದಕ್ಕೇ ಈ ರೀತಿ ಕನಸು ಬಿದ್ದಿದೆ. ನಾವು ಪ್ರಾಣಿಗಳಿಂದ ಕಲಿಯೋದು ಬಹಳಷ್ಟಿದೆ. ನೋಡು, ಆ ಕೋಳಿ ಕೂಗಿ ಎಲ್ಲರನ್ನೂ ಎಚ್ಚರಿಸುತ್ತಿದೆ. ಏಳು ಬೇಗ.

### ಪದಗಳ ಅರ್ಥ

ಚಿತ್ತಾರ–ಚಿತ್ರ; ನಿನಾದ–ಧ್ವನಿ; ಕಲರವ–ಪಕ್ಷಿಗಳ ಕೂಗು; ಸಂರಕ್ಷಿಸು–ಕಾಪಾಡು; ಮೂದಲಿಸು–ಹಂಗಿಸು, ಹೀಯಾಳಿಸು.

@KTBS NOT TO BE REPUBLISHED

## ಟಿಪ್ಪಣಿ

ಸಾಲುಮರದ ತಿಮ್ಮಕ್ಕ – ರಸ್ತೆ ಬದಿಯಲ್ಲಿ ಸಾಲು ಸಾಲಾಗಿ ನೂರಾರು ಸಸಿಗಳನ್ನು ನೆಟ್ಟು, ಪೋಷಿಸಿ ಮರಗಳನ್ನು ಬೆಳೆಸಿದ ಮಹಿಳೆ.

ವಲಸೆ – ಜನ ಗುಳೇ ಹೋಗುವುದು, ಒಕ್ಕಲು ಹೋಗುವುದು.

ಅತಿವೃಷ್ಟಿ – ಮಿತಿಮೀರಿದ ಮಳೆ

ಅನಾವೃಷ್ಟಿ – ಮಳೆ ಬಾರದಿರುವುದು.

## ಅಭ್ಯಾಸ

### ಅ) ಒಂದು ವಾಕ್ಯದಲ್ಲಿ ಉತ್ತರಿಸು.

೧. ಕಾಡಿಗೆ ಮರ ಕಡಿಯಲು ಬಂದವರು ಯಾರು?

_______________

೨. ಮಾನವ ಯಾರನ್ನು ಅಂಜುಬುರುಕ ಪ್ರಾಣಿ ಎಂದು ಹೇಳಿದನು?

_______________

೩. ಕೋತಿ ಮಾನವನನ್ನು ಏನೆಂದು ಪ್ರಶ್ನಿಸಿತು?

_______________

@KTBS NOT TO BE REPUBLISHED

### ಆ) ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸು.

೧. ಮೊಲವು ಮಾನವನನ್ನು ಅವಿವೇಕಿ ಎಂದು ಹೇಳಿದ್ದು ಏಕೆ?

_______________

_______________

೨. ರಾಜು ಕಂಡ ಕನಸೇನು?

_______________

_______________

೩. ಮಾನವನ ಸವಾಲಿಗೆ ಕಾಗೆಯ ಉತ್ತರವೇನು?

______________________________

______________________________

## ಇ) ಈ ವಾಕ್ಯಗಳನ್ನು, ಯಾರು, ಯಾರಿಗೆ ಹೇಳಿದರು ? ಬರೆ.

೧. "ಸಾಲುಮರದ ತಿಮ್ಮಕ್ಕನನ್ನು ನೋಡಿ ಕಲಿ"

ಯಾರು ಹೇಳಿದರು ? ______________________

ಯಾರಿಗೆ ಹೇಳಿದರು ? ______________________

೨. "ನಾವು ಪ್ರಾಣಿಗಳಿಂದ ಕಲಿಯೋದು ಬಹಳಷ್ಟಿದೆ"

ಯಾರು ಹೇಳಿದರು ? ______________________

ಯಾರಿಗೆ ಹೇಳಿದರು ? ______________________

@KTBS
NOT TO BE REPUBLISHED

## ಈ) 'ಅ' ಪಟ್ಟಿಯಲ್ಲಿನ ಪ್ರಾಣಿ ಪಕ್ಷಿಗಳನ್ನು 'ಬ' ಪಟ್ಟಿಯಲ್ಲಿನ ಅವುಗಳ ವಿಶೇಷತೆಗಳ ಜೊತೆ ಹೊಂದಿಸಿ ಬರೆ.

| ಅ | ಬ |
| --- | --- |
| ೧. ಕೋಗಿಲೆ | ಅ. ಸುಂದರವಾದ ಕಣ್ಣು |
| ೨ ಜಿಂಕೆ | ಬ. ಆಕರ್ಷಕ ನಡಿಗೆ |
| ೩. ನವಿಲು | ಕ. ಇಂಪಾದ ಧ್ವನಿ |

## ಉ) ವಿರುದ್ಧಾರ್ಥಕ ಪದ ಬರೆ.

೧. ಅಂಜುಬುರುಕ X ____________

೨. ಮೊದಲು X ____________

೩. ಉಳಿವು X ____________

೪. ಅತಿವೃಷ್ಟಿ X ____________

ಊ) ಚಿತ್ರ ನೋಡಿ ನಿನ್ನ ಅನಿಸಿಕೆ ಬರೆ.



_______________________

_______________________

_______________________

_______________________

## ಸಾಮರ್ಥ್ಯಾಧಾರಿತ ಚಟುವಟಿಕೆ

@KTBS NOT TO BE REPUBLISHED

ಅ) ಈ ಕೆಳಗಿನ ಸಾಲುಗಳನ್ನು ಸ್ಪಷ್ಟವಾಗಿ ಹಲವು ಬಾರಿ ಓದು.

೧. ಕಪ್ಪು ಕುಂಕುಮ ಕೆಂಪು ಕುಂಕುಮ

೨. ಸಂಪಂಗಪ್ಪನ ಮಗ ಮರಿ ಸಂಪಂಗಪ್ಪ

೩. ಕಾಗೆ ಪುಕ್ಕ ಗುಬ್ಬಿ ಪುಕ್ಕ

ಆ) ಈ ಪದಗಳನ್ನು ಸ್ಪಷ್ಟವಾಗಿ ಓದಿ, ನೀಡಿರುವ ಖಾಲಿ ಜಾಗದಲ್ಲಿ ಶುದ್ಧವಾಗಿ ಬರೆ.

| | | | | |
|---|---|---|---|---|
| ಮುಗಿಲೆತ್ತರ | ಪ್ರತಿಧ್ವನಿ | ನಿಮಿರು | ಭಯಮಿಶ್ರಿತ | ಅತಿವೃಷ್ಟಿ |
| ಮನಃಪರಿವರ್ತನೆ | ಉತ್ಪಾದಿಸು | ತೋರ್ಪಡಿಸು | ಅನಾವೃಷ್ಟಿ | ಸೌಂದರ್ಯ |

| | | | | |
|---|---|---|---|---|
| | | | | |
| | | | | |

**ಇ) ನಿನಗೆ ಗೊತ್ತಿರುವ ಕಥೆಗಳಲ್ಲಿ ಒಂದನ್ನು ಸರಿಯಾದ ಸ್ವರಭಾರ ಮತ್ತು ಅಭಿನಯದ ಮೂಲಕ ಗೆಳೆಯರಿಗೆ ಹೇಳು.**

೧. ಬಾಯಾರಿದ ಕಾಗೆ ಹೂಜಿಯಿಂದ ನೀರು ಕುಡಿದ ಕಥೆ.

೨. ಕೈಗೆಟುಕದ ದ್ರಾಕ್ಷಿಯನ್ನು ನರಿ ಹುಳಿಯೆಂದು ಬಿಟ್ಟು ಹೋದ ಕಥೆ.

೩. ಸಿಂಹವನ್ನು ಕಾಪಾಡಿದ ಇಲಿಯ ಕಥೆ.

## ಭಾಷಾ ಚಟುವಟಿಕೆ

**ಅ) ಕೊಟ್ಟಿರುವ ಪದಗಳನ್ನು ಓದಿ, ಧ್ವನಿ ಮತ್ತು ಅರ್ಥ ವ್ಯತ್ಯಾಸ ಗಮನಿಸು.**

೧. ಅರಸು – ಹರಸು   ೨. ಅಲ್ಲಿ – ಹಲ್ಲಿ   ೩. ಉಳಿ – ಹುಳಿ

## ಚಟುವಟಿಕೆ

೧. ಈ ಪಾಠವನ್ನು ಶಿಕ್ಷಕರ ಸಹಾಯ, ಮಾರ್ಗದರ್ಶನದೊಂದಿಗೆ ನಾಟಕ ರೂಪದಲ್ಲಿ ಅಭಿನಯಿಸು.

೨. ವಿವಿಧ ಪ್ರಾಣಿ ಪಕ್ಷಿಗಳ ಧ್ವನಿಯನ್ನು ಅನುಕರಣೆ ಮಾಡುವುದನ್ನು ಕಲಿ.

೩. ನಿನಗೆ ತಿಳಿದಿರುವ ಪ್ರಾಣಿ ಪಕ್ಷಿಗಳ ಚಿತ್ರಗಳನ್ನು ಈ ಕೆಳಗೆ ಕೊಟ್ಟಿರುವ ಜಾಗದಲ್ಲಿ ಅಂಟಿಸು.

@KTBS NOT TO BE REPUBLISHED

**ಪ್ರಾಣಿ ಚಿತ್ರಗಳು :**

**ಪಕ್ಷಿ ಚಿತ್ರಗಳು :**

ಪಾಠ ೩

# ಸ್ವಾತಂತ್ರ್ಯ ದಿನಾಚರಣೆ


– ಸಮಿತಿ ರಚನೆ

L2G1M7

**ಸಾಮರ್ಥ್ಯ :** ತರಗತಿಯಲ್ಲಿ ನಡೆಯುವ ಸಂವಾದದಲ್ಲಿ ಭಾಗವಹಿಸುವುದು. ಗುಂಪಿನಲ್ಲಿ ಮಾತನಾಡುವಾಗ ಸರದಿಯನ್ನು ಅನುಸರಿಸುವುದು.

**ಪ್ರವೇಶ :** ನಾವು ಹಬ್ಬಗಳನ್ನು ಆಚರಿಸುತ್ತೇವೆ. ಹಬ್ಬ ಆಚರಿಸಲು ಕೆಲವು ಸಿದ್ಧತೆಗಳು ಬೇಕು. ಎಲ್ಲ ಸಿದ್ಧತೆಗಳನ್ನು ಒಬ್ಬರೇ ಮಾಡಬೇಕಾದರೆ ತೊಂದರೆ ಅಲ್ಲವೇ? ಹಾಗಾದರೆ ಆ ತೊಂದರೆ ನಿವಾರಿಸಲು ಏನು ಮಾಡಬೇಕು ಎಂಬ ಕುತೂಹಲವೇ? ಶಾಲೆಯಲ್ಲಿ ಗುರುಗಳು ಹಾಗೂ ವಿದ್ಯಾರ್ಥಿಗಳು ಅನುಸರಿಸಿದ ಕ್ರಮವನ್ನು ಗಮನಿಸಿ ತಿಳಿ..

ಬಿಡುವಿನ ಸಮಯ. ಮುಖ್ಯ ಗುರುಗಳು ಶಾಲಾ ವಿದ್ಯಾರ್ಥಿ ಮಂತ್ರಿಮಂಡಲದ ಸಭೆ ಕರೆದರು. ಮಂತ್ರಿಗಳು ಸಭೆಗೆ ಬಂದರು.



**ಮುಖ್ಯ ಗುರುಗಳು :** ಮಕ್ಕಳೇ, ಇದು ಆಗಸ್ಟ್ ತಿಂಗಳು. ಈ ತಿಂಗಳಲ್ಲಿ ಆಚರಿಸುವ ರಾಷ್ಟ್ರೀಯ ಹಬ್ಬ ಯಾವುದು? ನೀ ಹೇಳಬಲ್ಲೆಯಾ ರಾಜು?

**ಎಲ್ಲರೂ :** ಸ್ವಾತಂತ್ರ್ಯ ದಿನಾಚರಣೆ ಸರ್.

**ಮುಖ್ಯ ಗುರುಗಳು :** ಹೀಗೆ ಎಲ್ಲರೂ ಒಟ್ಟಾಗಿ ಮಾತನಾಡಬಾರದು. ಸರದಿ ಅನುಸರಿಸಬೇಕು ತಿಳಿಯಿತೇ? ಸರಿ, ರಾಜು ನೀನು ಹೇಳು, ಸ್ವಾತಂತ್ರ್ಯ ದಿನಾಚರಣೆ ಎಂದರೇನು?

© KTBS NOT TO BE REPUBLISHED

**ರಾಜು (ಮುಖ್ಯಮಂತ್ರಿ)** : ನಮ್ಮ ದೇಶ ಸ್ವತಂತ್ರವಾದ ದಿನದ ನೆನಪಿಗಾಗಿ ಪ್ರತಿ ವರ್ಷ ದೇಶದಾದ್ಯಂತ ಆಚರಿಸುವ ಹಬ್ಬ.

**ಮೇರಿ (ಆರೋಗ್ಯ ಮಂತ್ರಿ)** : ಸ್ವತಂತ್ರವಾದ ದಿನ! ಹಾಗೆಂದರೇನು ಸರ್?

**ಮುಖ್ಯ ಗುರುಗಳು** : ಹಿಂದೆ ನಮ್ಮ ದೇಶವನ್ನು ಬ್ರಿಟಿಷರು ಆಳುತ್ತಿದ್ದರು. ದೇಶದ ಸ್ವಾಭಿಮಾನಿ ಜನರು ಗಾಂಧೀಜಿಯವರ ನೇತೃತ್ವದಲ್ಲಿ ಅವರ ವಿರುದ್ಧ ಹೋರಾಡಿ ಸ್ವಾತಂತ್ರ್ಯ ತಂದುಕೊಟ್ಟರು. ಅವರ ದೇಶಾಭಿಮಾನ, ತ್ಯಾಗ ಹಾಗೂ ಬಲಿದಾನದಿಂದ ೧೯೪೭ ಆಗಸ್ಟ್ ೧೫ ರಂದು ನಮ್ಮ ದೇಶ ಸ್ವತಂತ್ರ ವಾಯಿತು. ದೇಶ ಸ್ವತಂತ್ರವಾದ ಸವಿ ನೆನಪಿಗೆ ಪ್ರತಿ ವರ್ಷ ದೇಶಾದ್ಯಂತ ಆಚರಿಸುವ ಹಬ್ಬವೇ ಸ್ವಾತಂತ್ರ್ಯ ದಿನಾಚರಣೆ.

**ಷರೀಫ್ (ಉಪ ಮುಖ್ಯಮಂತ್ರಿ)** : ನಮ್ಮ ಶಾಲೆಯಲ್ಲೂ ಆಚರಿಸುತ್ತೇವಲ್ಲ ಸರ್?

**ಮುಖ್ಯ ಗುರುಗಳು** : ಹೌದು, ಅದಕ್ಕಾಗಿ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು.

**ಷಾಹಿನ್ (ಗೃಹ ಮಂತ್ರಿ)** : ಏನೇನು ಸಿದ್ಧತೆ ಮಾಡಬೇಕಿದೆ? ಹೇಳಿ ಸರ್.

**ಮುಖ್ಯ ಗುರುಗಳು** : ಆಟೋಟ ಸ್ಪರ್ಧೆ ಏರ್ಪಡಿಸಬೇಕು. ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡುವವರನ್ನು ಗುರುತಿಸಬೇಕು. ಮೈದಾನವನ್ನು ಸ್ವಚ್ಛಗೊಳಿಸಬೇಕು. ಶಾಲೆಯನ್ನು ತಳಿರು ತೋರಣಗಳಿಂದ ಅಲಂಕರಿಸಬೇಕು.

**ಐಶ್ವರ್ಯ (ಸಂಸ್ಕೃತಿ ಮಂತ್ರಿ)** : ಗುರುಗಳೇ, ನಾವು ಕೆಲಸ ಹಂಚಿಕೊಂಡು ಸಿದ್ಧತೆ ಮಾಡುತ್ತೇವೆ.

**ಮುಖ್ಯ ಗುರುಗಳು** : ಸಂತೋಷ. ಯಾರು ಯಾರು, ಯಾವ ಯಾವ ಕೆಲಸಗಳನ್ನು ಹಂಚಿಕೊಳ್ಳುವಿರಿ?

**ವಿವೇಕ್ (ಕ್ರೀಡಾ ಮಂತ್ರಿ)** : ಸರ್, ಮಂತ್ರಿ ಮಂಡಲದ ಎಲ್ಲ ಸದಸ್ಯರು ಸೇರಿ ಆಟೋಟ ಸ್ಪರ್ಧೆ ನಡೆಸಿ ವಿಜೇತರ ಪಟ್ಟಿಯನ್ನು ಸಿದ್ಧಪಡಿಸುತ್ತೇವೆ.

(ಷಾಹಿನ್ ಮತ್ತು ಐಶ್ವರ್ಯ ಮಾತನಾಡುತ್ತಿದ್ದರು)

@KTBS NOT TO BE REPUBLISHED

ಮುಖ್ಯ ಗುರುಗಳು : ಷಾಹಿನ್, ಐಶ್ವರ್ಯ ಒಬ್ಬರು ಮಾತಾಡುವಾಗ ನಿಮ್ಮ ನಿಮ್ಮೊಳಗೆ ಮಾತಾಡಬಾರದು.ಇತರರ ಅಭಿಪ್ರಾಯವನ್ನು ಕೇಳಿಸಿಕೊಳ್ಳಬೇಕು.

ಐಶ್ವರ್ಯ (ಸಂಸ್ಕೃತಿ ಮಂತ್ರಿ) : ಕ್ಷಮಿಸಿ ಸರ್, ಇನ್ನು ಮೇಲೆ ಗಮನವಿಟ್ಟು ಕೇಳುತ್ತೇವೆ.

ಮುಖ್ಯ ಗುರುಗಳು : ಹ್ಞಾ! ಜಾಣ ಮಕ್ಕಳು.

ಕಾರ್ತಿಕ್ (ಪೌರಾಡಳಿತ ಮಂತ್ರಿ) : ಸರ್, ನಾವು ನಾಲ್ಕನೆಯ ತರಗತಿಯವರು ಶಾಲೆಯ ಮೈದಾನವನ್ನು ಸ್ವಚ್ಛಗೊಳಿಸುತ್ತೇವೆ.

ಐಶ್ವರ್ಯ (ಸಂಸ್ಕೃತಿ ಮಂತ್ರಿ) : ನಾನು ಸಾಂಸ್ಕೃತಿಕ ಕಾರ್ಯಕ್ರಮ ನೀಡುವವರ ಪಟ್ಟಿ ಸಿದ್ಧಪಡಿಸುತ್ತೇನೆ.

ಮೇರಿ (ಆರೋಗ್ಯ ಮಂತ್ರಿ) : ನಾವು ಎರಡನೆಯ ತರಗತಿಯವರು ಬಣ್ಣದ ಕಾಗದದಿಂದ ತೋರಣ ಕಟ್ಟುತ್ತೇವೆ.

ಪಂಕಜ (ಹಣಕಾಸು ಮಂತ್ರಿ): ನಾವು ಮೂರನೆಯ ತರಗತಿಯವರು ಧ್ವಜಸ್ತಂಭವನ್ನು ಸಿಂಗರಿಸುತ್ತೇವೆ ಸರ್.

ಐಶ್ವರ್ಯ (ಸಂಸ್ಕೃತಿ ಮಂತ್ರಿ) : ಧ್ವಜ ಸ್ತಂಭದ ಸುತ್ತ ರಂಗವಲ್ಲಿ ಹಾಕಿದರೆ ಚೆನ್ನಾಗಿರುತ್ತದೆ.

ಮೇರಿ (ಆರೋಗ್ಯ ಮಂತ್ರಿ) : ಒಳ್ಳೆಯ ಸಲಹೆ, ಪಂಕಜ ಚೆನ್ನಾಗಿ ರಂಗವಲ್ಲಿ ಹಾಕುತ್ತಾಳೆ. ಅವಳಿಂದ ಹಾಕಿಸೋಣವೇ ಸರ್?

ಮುಖ್ಯ ಗುರುಗಳು : ಒಳ್ಳೆಯದು, ಮೇರಿಯ ಸಲಹೆ ಎಲ್ಲರಿಗೂ ಒಪ್ಪಿಗೆಯೇ?

ಎಲ್ಲರೂ : ಓ.... ಆಗಬಹುದು ಸರ್.

ಕಾರ್ತಿಕ್ (ಪೌರಾಡಳಿತ ಮಂತ್ರಿ) : ಅಲಂಕಾರಕ್ಕೆ ಸಾಮಗ್ರಿಗಳನ್ನು ತರುವವರು ಯಾರು?

ರಾಜು (ಮುಖ್ಯಮಂತ್ರಿ) : ನಮ್ಮ ತೋಟದಿಂದ ಮಾವಿನ ತಳಿರು, ಬಾಳೆಕಂಬ ತರುತ್ತೇನೆ. ಎಲ್ಲರೂ ಸೇರಿ ಶಾಲೆಯನ್ನು ಸಿಂಗರಿಸೋಣ.

ಐಶ್ವರ್ಯ (ಸಂಸ್ಕೃತಿ ಮಂತ್ರಿ) : ನಾವು ಐದನೆಯ ತರಗತಿಯವರು ರಾಷ್ಟ್ರ ನಾಯಕರ ಭಾವ ಚಿತ್ರಗಳಿಗೆ ಹೂವಿನ ಹಾರ ಹಾಕಿ ಅಲಂಕರಿಸುತ್ತೇವೆ. ಸರ್ ಮತ್ತೇ... (ಮಾತು ಮುಂದುವರಿಸುವಳು)

ಮುಖ್ಯ ಗುರುಗಳು : ಐಶ್ವರ್ಯಾ, ಇತರರಿಗೂ ಮಾತನಾಡಲು ಅವಕಾಶ ಕೊಡಬೇಕಲ್ಲವೇ?

© KTBS NOT TO BE REPUBLISHED

ರಮಾ (ವಿದ್ಯಾ ಮಂತ್ರಿ) : ನಾನು ಒಂದನೆಯ ತರಗತಿಯವರೊಡನೆ ಸೇರಿ ಶಾಲಾ ಕೈತೋಟದಿಂದ ಹೂಗಳನ್ನು ಬಿಡಿಸಿ ತರುತ್ತೇನೆ.

ಮುಖ್ಯ ಗುರುಗಳು : ಸರಿ, ಹಾಗಾದರೆ ನಾನು ಕಾರ್ಯಕ್ರಮಕ್ಕೆ ಬರುವಂತೆ ಅತಿಥಿಗಳನ್ನು ಆಮಂತ್ರಿಸುತ್ತೇನೆ. ನಿಮ್ಮ ಕೆಲಸಗಳಲ್ಲಿ ಶಿಕ್ಷಕರು ಮಾರ್ಗದರ್ಶನ ನೀಡುತ್ತಾರೆ. ಮುಂದಿನ ಸಿದ್ಧತೆ ಮಾಡಿಕೊಳ್ಳಿ.

(ಎಲ್ಲರೂ ಶಿಕ್ಷಕರ ಮಾರ್ಗದರ್ಶನದಲ್ಲಿ ತಮ್ಮ ಕೆಲಸಕ್ಕೆ ಪೂರ್ವ ತಯಾರಿ ಮಾಡಿಕೊಂಡರು.)

ಸ್ವಾತಂತ್ರ್ಯ ದಿನಾಚರಣೆಯ ದಿನದಂದು ಮಕ್ಕಳು ನಸುಕಿನಲ್ಲಿಯೇ ಎದ್ದು ಸಿದ್ಧರಾದರು. ಸಮವಸ್ತ್ರ ಧರಿಸಿ ಶಾಲೆಗೆ ಬಂದರು.

ಎಲ್ಲರೂ ತಾವು ವಹಿಸಿಕೊಂಡಿದ್ದ ಕೆಲಸವನ್ನು ಪೂರ್ಣಗೊಳಿಸಿದರು. ಗುರುಗಳೊಂದಿಗೆ ಜಯಘೋಷ ಹಾಕುತ್ತ ಪ್ರಭಾತಫೇರಿಯಲ್ಲಿ ಪಾಲ್ಗೊಂಡರು. ಮಕ್ಕಳ ಶಿಸ್ತನ್ನು ನೋಡಿ ಗ್ರಾಮಸ್ಥರು ಸಂತೋಷಪಟ್ಟರು.

©KTBS NOT TO BE REPUBLISHED



ಶಾಲಾ ಮೈದಾನದಲ್ಲಿ ಪಂಚಾಯಿತಿ ಅಧ್ಯಕ್ಷರು ಧ್ವಜಾರೋಹಣ ಮಾಡಿದರು. ಎಲ್ಲರೂ ರಾಷ್ಟ್ರಗೀತೆ ಹಾಡಿದರು. ಅನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಮುಖ್ಯ ಗುರುಗಳು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ದೇಶಭಕ್ತಿಯ ಕುರಿತು ಮಾತನಾಡಿದರು. ಆಟೋಟ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಮುಖ್ಯ ಅತಿಥಿಗಳು ಬಹುಮಾನ ವಿತರಿಸಿದರು. ಕೊನೆಯಲ್ಲಿ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ನೆರೆದಿದ್ದ ಜನರು ಸಂತೋಷದಿಂದ ಚಪ್ಪಾಳೆ ತಟ್ಟಿದರು. ಎಲ್ಲರೂ ಸಿಹಿ ಸವಿದು ಕಾರ್ಯಕ್ರಮ ಮೆಲುಕು ಹಾಕುತ್ತಾ ತೆರಳಿದರು.

## ಪದಗಳ ಅರ್ಥ

ರಾಷ್ಟ್ರ–ದೇಶ; ಸರದಿ–ಅನುಕ್ರಮ; ಸ್ವಾಭಿಮಾನ–ಆತ್ಮಗೌರವ; ಸ್ಪರ್ಧೆ–ಪೈಪೋಟಿ; ತಳಿರು–ಚಿಗುರು; ಅಭಿಪ್ರಾಯ–ಅನಿಸಿಕೆ; ಧ್ವಜಸ್ತಂಭ–ಬಾವುಟ ಹಾರಿಸುವ ಕಂಬ; ಭಾವಚಿತ್ರ–ವ್ಯಕ್ತಿಯ ಚಿತ್ರ; ಆಮಂತ್ರಿಸು–ಆಹ್ವಾನಿಸು ; ನೆರೆ– ಒಟ್ಟಾಗು; ಗುಂಪು ಸೇರು; ಮಾರ್ಗದರ್ಶನ– ತಿಳಿಹೇಳುವುದು, ದಾರಿತೋರುವುದು; ನಸುಕು–ಮುಂಜಾನೆ, ಬೆಳಗಿನ ಜಾವ; ಜಯಘೋಷ–ಜಯಕಾರ; ವಿಜೇತರು–ಗೆದ್ದವರು.

NOT TO BE REPUBLISHED ©KTBS

## ಟಿಪ್ಪಣಿ

| | |
|---|---|
| ಅತಿಥಿ | : ಆಹ್ವಾನಿತ ವ್ಯಕ್ತಿ |
| ಸಾಂಸ್ಕೃತಿಕ ಕಾರ್ಯಕ್ರಮ | : ಸಂಸ್ಕೃತಿಗೆ ಸಂಬಂಧಿಸಿದ ಕಾರ್ಯಕ್ರಮ. |
| ರಾಷ್ಟ್ರನಾಯಕರು | : ದೇಶಸೇವೆ ಮಾಡಿದ ಮಹನೀಯರು |
| ಪ್ರಭಾತಫೇರಿ | : ಬೆಳಗಿನ ಜಾವದಲ್ಲಿ ನಡೆಸುವ ಮೆರವಣಿಗೆ |
| ಸಮವಸ್ತ್ರ | : ಒಂದೇ ರೂಪದ ವಸ್ತ್ರ |

## ಅಭ್ಯಾಸ

**ಅ) ಒಂದು ವಾಕ್ಯದಲ್ಲಿ ಉತ್ತರಿಸು.**

೧. ಮುಖ್ಯ ಗುರುಗಳು ಯಾರ ಸಭೆ ಕರೆದರು?

_______________

೨. ಸ್ವಾತಂತ್ರ್ಯ ದಿನವನ್ನು ಎಂದು ಆಚರಿಸುತ್ತೇವೆ?

_______________

೩. ಯಾರು ಕ್ಷಮೆ ಕೋರಿದರು?

## ಆ) ಎರಡು/ಮೂರು ವಾಕ್ಯಗಳಲ್ಲಿ ಉತ್ತರಿಸು.

೧. ಮಂತ್ರಿಮಂಡಲದ ಸಭೆಯಲ್ಲಿ ಯಾವುದರ ಬಗ್ಗೆ ಚರ್ಚಿಸಿದರು?

೨. ಸ್ವಾತಂತ್ರ್ಯ ದಿನಾಚರಣೆ ಎಂದರೇನು?

೩. ಐಶ್ವರ್ಯ ನೀಡಿದ ಸಲಹೆ ಏನು?

೪. ಕ್ರೀಡಾ ಮಂತ್ರಿ ವಹಿಸಿಕೊಂಡ ಕಾರ್ಯವೇನು?

೫. ಮೂರನೆಯ ತರಗತಿಯವರು ವಹಿಸಿಕೊಂಡ ಕಾರ್ಯ ಯಾವುದು?

## ಇ) ಕಾರಣ ಕೊಡು.

೧. ಮುಖ್ಯ ಗುರುಗಳು ಮಂತ್ರಿಮಂಡಲದ ಸಭೆ ಕರೆದರು.

©KTBS NOT TO BE REPUBLISHED

೨. ಇತರರು ಮಾತನಾಡುವಾಗ ಕೇಳಿಸಿಕೊಳ್ಳಬೇಕು.

_______________

_______________

೩. ಸಭೆಯಲ್ಲಿ ಒಟ್ಟಾಗಿ ಮಾತನಾಡಬಾರದು.

_______________

_______________

**ಈ) ಈ ಮಾತುಗಳನ್ನು ಯಾರು? ಯಾರಿಗೆ ಹೇಳಿದರು? ಎಂದು ಬರೆ.**

೧. "ನಮ್ಮ ಶಾಲೆಯಲ್ಲೂ ಆಚರಿಸುತ್ತೇವಲ್ಲ ಸರ್?"

ಯಾರು ಹೇಳಿದರು ? _______________

ಯಾರಿಗೆ ಹೇಳಿದರು ? _______________

೨. "ಒಳ್ಳೆಯದು, ಮೇರಿಯ ಸಲಹೆ ಎಲ್ಲರಿಗೂ ಒಪ್ಪಿಗೆಯೇ?"

ಯಾರು ಹೇಳಿದರು ? _______________

ಯಾರಿಗೆ ಹೇಳಿದರು ? _______________

೩. "ನಮ್ಮ ತೋಟದಿಂದ ಮಾವಿನ ತಳಿರು, ಬಾಳೆಕಂಬ ತರುತ್ತೇನೆ."

ಯಾರು ಹೇಳಿದರು ? _______________

ಯಾರಿಗೆ ಹೇಳಿದರು ? _______________

**ಉ) ಈ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸು.**

ತೋರಣ : _______________

ರಂಗವಲ್ಲಿ : _______________

ಬಹುಮಾನ : _______________

ಸಮವಸ್ತ್ರ : _______________

## ಸಾಮರ್ಥ್ಯಾಧಾರಿತ ಅಭ್ಯಾಸ

**ಅ) ಸರಿ–ತಪ್ಪು ಗುರುತಿಸು.**

೧. ಕಾರ್ಯಕ್ರಮ ಮಾಡುವಾಗ ಕೆಲಸ ಹಂಚಿಕೊಳ್ಳಬಾರದು. ( )

೨. ಕಾರ್ಯಕ್ರಮ ಮಾಡುವ ಮೊದಲು ಸಭೆಯಲ್ಲಿ ಚರ್ಚೆ ಮಾಡಬೇಕು. ( )

@KTBS NOT TO BE REPUBLISHED

೩. ಚರ್ಚೆಯಲ್ಲಿ ಇತರರು ಮಾತನಾಡುವಾಗ ಕೇಳಿಸಿಕೊಳ್ಳಬೇಕು. ( )

೪. ಸಭೆಯಲ್ಲಿ ಒಟ್ಟಾಗಿ ಮಾತನಾಡಿದರೆ ತೊಂದರೆ. ( )

೫. ಸಭೆಯಲ್ಲಿ ಒಬ್ಬರ ಅನಂತರ ಒಬ್ಬರು ಮಾತನಾಡಬಾರದು. ( )

೬. ಇತರರ ಒಳ್ಳೆಯ ಮಾತನ್ನು ಕೇಳಬೇಕು. ( )

## ಆ) ಉತ್ತರಿಸು.

೧. ನೀನು ಶಾಲೆಯಲ್ಲಿ ವಹಿಸಿಕೊಂಡು ಮಾಡಿದ ಒಂದು ಕೆಲಸವನ್ನು ಬರೆ.

________________________________

೨. ನೀನು ಮನೆಯಲ್ಲಿ ವಹಿಸಿಕೊಂಡು ಮಾಡಿದ ಒಂದು ಕೆಲಸವನ್ನು ಬರೆ.

________________________________

೩. ನಿನ್ನ ಮನೆಯಲ್ಲಿ ಎಲ್ಲರೂ ಕುಳಿತು ಚರ್ಚಿಸಿ ಮಾಡಿರುವ ಕೆಲಸ ಯಾವುದು?

________________________________

@KTBS NOT TO BE REPUBLISHED

## ಇ) ಚಿತ್ರ ನೋಡಿ ಸಲಹೆ ನೀಡು.



________________________________

________________________________

________________________________

________________________________

## ಭಾಷಾಭ್ಯಾಸ

**ಅ) ಸರಿಯಾದ ಅರ್ಥ ಬರುವಂತೆ ಪದಗಳನ್ನು ಜೋಡಿಸಿ ವಾಕ್ಯಗಳನ್ನು ಸರಿಪಡಿಸಿ ಬರೆ.**

೧. ಸಮವಸ್ತ್ರ / ಮಕ್ಕಳು / ಧರಿಸಿ / ಬಂದರು / ಶಾಲೆಗೆ

______________________________

೨. ಮಕ್ಕಳು / ಸಾಂಸ್ಕೃತಿಕ / ನಡೆಸಿಕೊಟ್ಟರು / ಕಾರ್ಯಕ್ರಮ

______________________________

೩. ಕೈತೋಟದಲ್ಲಿ / ಶಾಲೆಯ / ಹೂ / ಗಿಡಗಳಿವೆ

______________________________

**ಆ) ಅ, ಆ ಮತ್ತು ಇ ಮನೆಗಳಲ್ಲಿರುವ ಪದಗಳನ್ನು ಕ್ರಮವಾಗಿ ಬಳಸಿ ಅರ್ಥಪೂರ್ಣ ವಾಕ್ಯಗಳನ್ನು ರಚಿಸು.**

**ಮಾದರಿ : ಅವನು ಮನೆಗೆ ಹೋಗುತ್ತಾನೆ**

| ಅ | ಆ | ಇ | ವಾಕ್ಯಗಳು |
|---|---|---|---|
| ನಾನು | ಮನೆಗೆ | ಹೋಗುತ್ತವೆ | |
| ನೀನು | | ಹೋಗುತ್ತೇನೆ | |
| ಅವನು | | ಹೋಗುವೆಯಾ | |
| ಅವಳು | | ಹೋಗುತ್ತಾನೆ | |
| ರಮೇಶ | | ಹೋದರು | |
| ಕವಿತಾ | | ಹೋಗಲಿಲ್ಲ | |
| ಗುರುಗಳು | | ಹೋಗಬೇಕು | |
| ಹಸುಗಳು | | ಹೋಗುತ್ತಾಳೆ | |

ನಿನಗಿದು ತಿಳಿದಿರಲಿ : ವಾಕ್ಯವೆಂದರೆ ಸರಿಯಾದ ಅರ್ಥ ಕೊಡುವ ಪದಗಳ ಗುಂಪು

@KTBS NOT TO BE REPUBLISHED

## ಭಾಷಾ ಚಟುವಟಿಕೆ

**ಅ) ಈ ಜೋಡುನುಡಿಗಳನ್ನು ಗಮನಿಸಿ ನಕಲು ಮಾಡು.**

(ತಳಿರುತೋರಣ, ಸಿಹಿಕಹಿ, ಹಳ್ಳಕೊಳ್ಳ, ಬೆಟ್ಟಗುಡ್ಡ, ನೋವುನಲಿವು)

______________________ ______________________

______________________ ______________________

______________________

**ಆ) ಆವರಣದಲ್ಲಿ ಕೊಟ್ಟಿರುವ ಸಮಾನಾರ್ಥಕ ಪದವನ್ನು ಗುರುತಿಸಿ ಮಾದರಿಯಂತೆ ಬರೆ. (ಬಟ್ಟೆ, ಬಾವುಟ, ಮುಂಜಾನೆ, ತಯಾರಿ, ಅಣಿ, ಬೆಳಗಿನ ಜಾವ, ಪತಾಕೆ, ಕುಸುಮ, ಪುಷ್ಪ, ಅರಿವೆ)**

@KTBS NOT TO BE REPUBLISHED

ಮಾದರಿ : ವಸ್ತ್ರ – ಬಟ್ಟೆ ಅರಿವೆ

ಧ್ವಜ – ______________________ ______________________

ನಸುಕು – ______________________ ______________________

ಸಿದ್ಧತೆ – ______________________ ______________________

ಹೂ – ______________________ ______________________

**ನಿನಗಿದು ತಿಳಿದಿರಲಿ :** ಸಮಾನಾರ್ಥಕ ಪದಗಳು ಎಂದರೆ ಒಂದೇ ಅರ್ಥ ಕೊಡುವ ಬೇರೆ ಬೇರೆ ಪದಗಳು.



ಪಾಠ ೪

# ಕಂದ (ಪದ್ಯ)

P1L8T6

**ಸಾಮರ್ಥ್ಯ :** ಉಕ್ತಲೇಖನದ ಮೂಲಕ ಅಪರಿಚಿತ ಪದಗಳನ್ನು ಬರೆಯುವುದು.

**ಪ್ರವೇಶ:** ಮನೆಯಲ್ಲಿ ಅಪ್ಪ, ಅಮ್ಮ, ಅಜ್ಜ, ಅಜ್ಜಿ ಮತ್ತಿತರರು ಮಕ್ಕಳನ್ನು ಪ್ರೀತಿ ಮಾತುಗಳಿಂದ ಮುದ್ದಿಸುವುದನ್ನು ನೀನು ನೋಡಿರಬಹುದು. ಅದೇ ರೀತಿ ನಿನ್ನನ್ನೂ ಮುದ್ದು ಮಾಡಿರಬಹುದು ನೆನಪಿಸಿಕೊ. ಇಲ್ಲಿ ಪ್ರೀತಿ ಮಾತುಗಳಿಂದ ಮುದ್ದಿಸುವ ಸಂದರ್ಭವಿದೆ. ಅದನ್ನು ನಿನ್ನ ಅನುಭವದೊಂದಿಗೆ ಹೊಂದಿಸಿ ನೋಡು.

ಕೂಸು ಇದ್ದ ಮನಿಗೆ ಬೀಸಣಿಗೆ ಯಾತಕ
ಕೂಸು ಕಂದಯ್ಯ ಒಳ ಹೊರಗ । ಆಡಿದರ
ಬೀಸಣಿಗೆ ಗಾಳಿ ಸುಳಿದಾವ ॥

ಆಡಿ ಬಾ ನನ ಕಂದ ಅಂಗಾಲ ತೊಳೆದೇನ
ತೆಂಗಿನ ಕಾಯಿ ತಿಳಿನೀರ । ತಕ್ಕೊಂಡು
ಬಂಗಾರ ಮಾರಿ ತೊಳೆದೇನ ॥

ಅಳುವ ಕಂದನ ತುಟಿಯು ಹವಳದ ಕುಡಿಹಂಗ
ಕುಡಿಹುಬ್ಬು ಬೇವಿನೆಸಳ್ಹಂಗ । ಕಣ್ಣೋಟ
ಶಿವನ ಕೈಯಲಗು ಹೊಳೆದ್ಹಂಗ ॥

ಕಂದಾನ ಕಿರಿಕಿರಿ ಇಂದೇನು ಹೇಳಲಿ
ಬಿಂದೀಗೆ ಹಾಲು ಸುರಿವಂದ । ಚಂಜೀಯ
ಚಂದ್ರಮನ ತಂದು ನಿಲಿಸೆಂದಾ ॥



– ಜನಪದ

@KTBS NOT TO BE REPUBLISHED

## ಪದಗಳ ಅರ್ಥ

ಕುಡಿ – ಚಿಗುರು; ಅಲಗು – ಕತ್ತಿಯ ಅಂಚು; ಎಸಳು – ಹೂವಿನ ದಳ ; ಕಿರಿಕಿರಿ – ಕಾಟ ; ಬಂಗಾರ – ಚಿನ್ನ ; ಚಂಜೀಯ – ಸಂಜೆಯ.

## ಟಿಪ್ಪಣಿ

ಬೀಸಣಿಗೆ – ಗಾಳಿ ಬೀಸಿಕೊಳ್ಳಲು ಬಳಸುವ ಸಾಧನ.

ಹವಳ – ಒಂದು ಜಾತಿಯ ಕೆಂಪು ಬಣ್ಣದ ಮಣಿ, ನವರತ್ನಗಳಲ್ಲಿ ಒಂದು. (ವಜ್ರ, ಮಾಣಿಕ್ಯ, ಮರಕತ, ಪುಷ್ಯರಾಗ, ನೀಲ, ಗೋಮೇಧಿಕ, ವೈಢೂರ್ಯ, ಮುತ್ತು, ಹವಳ.)

## ಅಭ್ಯಾಸ

**ಅ) ಈ ಸಾಲುಗಳನ್ನು ಪದ್ಯದಲ್ಲಿರುವಂತೆ ಪೂರ್ಣಗೊಳಿಸು.**

೧. ಅಳುವ ಕಂದನ ತುಟಿಯು ______

೨. ಆಡಿ ಬಾ ನನ ಕಂದ ______

೩. ಕೂಸು ಇದ್ದ ಮನಿಗೆ ______

೪. ಕಂದಾನ ಕಿರಿಕಿರಿ ______

@KTBS NOT TO BE REPUBLISHED

**ಆ) ಒಂದು ವಾಕ್ಯದಲ್ಲಿ ಉತ್ತರಿಸು.**

೧. ತಾಯಿಯು ಕಂದನ ಅಂಗಾಲನ್ನು ಯಾವುದರಿಂದ ತೊಳೆಯುವುದಾಗಿ ಹೇಳುತ್ತಾಳೆ?

______

೨. ಅಳುವ ಕಂದನ ತುಟಿಯನ್ನು ಯಾವುದಕ್ಕೆ ಹೋಲಿಸಲಾಗಿದೆ?

______

೩. ಅಳುವ ಕಂದನ ಕಣ್ನೋಟ ಹೇಗಿರುತ್ತದೆ?

______

೪. ಮಗು ಏನನ್ನು ತಂದು ನಿಲ್ಲಿಸೆಂದು ಕೇಳುತ್ತದೆ?

______

ಇ) ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸು.

೧. ಕೂಸು ಇದ್ದ ಮನೆಗೆ ಬೀಸಣಿಗೆ ಬೇಡ. ಏಕೆ?

________________________________________

________________________________________

೨. ಆಡಿ ಬರುವ ಕಂದನನ್ನು ತಾಯಿ ಹೇಗೆ ಉಪಚರಿಸುವಳು?

________________________________________

________________________________________

## ಸಾಮರ್ಥ್ಯಾಧಾರಿತ ಚಟುವಟಿಕೆ

ಅ) ತಪ್ಪುಗಳನ್ನು ಸರಿಪಡಿಸಿ ಬರೆ.

೧. ಬೀಸಣಿಗೆ ಗಾಳಿ ಸುಳಿದವ : ____________________

೨. ಕುಡಿಹುಬು ಬೇವಿನೆಸಳಂಗ : ____________________

೩. ಚಂದಮನ ತಂದು ನಿಲಿಸೆಂದ: ____________________

©KTBS NOT TO BE REPUBLISHED

ಆ) ಈ ಸಾಲುಗಳನ್ನು ನಕಲು ಮಾಡು.

ಆಡಿ ಬಾ ನನ ಕಂದ ಅಂಗಾಲ ತೊಳೆದೇನ

________________________________________

________________________________________

ಕುಡಿ ಹುಬ್ಬು ಬೇವಿನೆಸಳ್ಹಂಗ

________________________________________

________________________________________

ಇ) ಕಂದ ಪದ್ಯದಲ್ಲಿ ಒತ್ತಕ್ಷರಗಳಿರುವ ಪದಗಳನ್ನು ಬರೆ.

೧. __________ ೨. __________ ೩. __________

೪. __________ ೫. __________ ೬. __________

## ಭಾಷಾಭ್ಯಾಸ



**ಅ) ಊಹಿಸಿ ಬರೆ.**

೧. ಮಗು ಏಕೆ ನಗುತ್ತಿರಬಹುದು?

________________________________________

## ಭಾಷಾ ಚಟುವಟಿಕೆ

**ಅ) ಸಮಾನಾರ್ಥಕ ಪದಗಳನ್ನು ಬರೆ.**

೧. ಬಂಗಾರ = ________ ________

೨. ಕೂಸು = ________ ________

೩. ತಾಯಿ = ________ ________

**ಆ) ಈ ವಾಕ್ಯಗಳಲ್ಲಿ ಅಡಿ ಗೆರೆ ಹಾಕಿದ ಪದಗಳಿಗೆ ಗ್ರಾಂಥಿಕ ರೂಪ ಬರೆ.**

೧. ಕೂಸು ಇದ್ದ ಮನಿಗೆ ಬೀಸಣಿಗೆ ಯಾತಕ? ________

೨. ಬಂಗಾರ ಮಾರಿ ತೊಳೆದೇನ ________

೩. ಬೀಸಣಿಗೆ ಗಾಳಿ ಸುಳಿದಾವ ________

೪. ಚಂಜೀಯ ಚಂದ್ರಮನ ನಿಲಿಸೆಂದಾ ________

**ಇ) ಈ ಪದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆ.**

ಮಾದರಿ : ಹೊಳೆದ್ಹಂಗ = ಹೊಳೆದ ಹಾಗೆ

೧. ಕುಡಿಹಂಗ = ________________

೨. ಎಸಳ್ಹಂಗ = ________________

೩. ನೆನೆದ್ಹಂಗ = ________________

೪. ಬಂದ್ಹಂಗ = ________________

೫. ಕುಳಿತ್ಹಂಗ = ________________

## ಚಟುವಟಿಕೆ

**ಅ) ಕಂದ ಪದ್ಯವನ್ನು ಕಲಿತು ಹಾಡು. ಇಂತಹ ಜನಪದ ಹಾಡುಗಳನ್ನು ಸಂಗ್ರಹಿಸು.**

@KTBS NOT TO BE REPUBLISHED

N7L2X4

# ಪಾಠ ೫ ಚಿಗುರು

– ಸಮಿತಿ ರಚನೆ

**ಸಾಮರ್ಥ್ಯ :** ಸಹಪಾಠಿಗಳ ಕೈ ಬರೆಹವನ್ನು ಓದುವುದು.


## ಪ್ರವೇಶ

- ಪಠ್ಯ ಪುಸ್ತಕ, ಮದುವೆ, ಗೃಹಪ್ರವೇಶ ಮುಂತಾದ ಆಮಂತ್ರಣ ಪತ್ರಿಕೆ, ಸಮಾಚಾರ ಪತ್ರಿಕೆಗಳನ್ನು ನೋಡಿರುವೆ. ಇವು ಮುದ್ರಿತ ರೂಪದಲ್ಲಿವೆ. ನಾವು ಇವುಗಳಲ್ಲಿನ ಮುದ್ರಿತ ವಿಷಯಗಳನ್ನು ಓದಿ ತಿಳಿಯುತ್ತೇವೆ.
- ನಾವು ಮುದ್ರಿತ ವಿಷಯಗಳನ್ನು ಮಾತ್ರ ಓದುವುದಿಲ್ಲ. ಕೆಲವು ವೇಳೆ ಕೈಬರೆಹದಲ್ಲಿರುವ ವಿಷಯುಗಳನ್ನು ಓದಿ ತಿಳಿಯುತ್ತೇವೆ. ಅಲ್ಲದೆ ಹೇಳಬೇಕಾದುದನ್ನು ಅಥವಾ ಆಲೋಚಿಸಿದ್ದನ್ನು ಕೈಬರೆಹದಲ್ಲಿ ಬರೆಯುತ್ತೇವೆ ಅಲ್ಲವೇ?
- ನಿನ್ನ ಶಾಲಾ ಪತ್ರಿಕೆಯಲ್ಲಿ ನಿನ್ನ ಲೇಖನ ಪ್ರಕಟವಾಗಿರಬಹುದು. ಈ ಶಾಲಾ ಪತ್ರಿಕೆಯಲ್ಲಿರುವ ಕೈಬರೆಹದ ಲೇಖನವನ್ನು ಓದಿ ತಿಳಿ. ಕೈಬರೆಹದಲ್ಲಿನ ವೈವಿಧ್ಯತೆಯನ್ನು ಗುರುತಿಸು.

ಅಂದು ಶನಿವಾರ. ಸಂಪಾದಕ ಮಂಡಳಿಯವರು ವಿದ್ಯಾರ್ಥಿಗಳಿಂದ ಬಂದ ಲೇಖನಗಳನ್ನು ಪರಿಶೀಲಿಸಿದರು. ಉತ್ತಮ ಲೇಖನಗಳನ್ನು ಆಯ್ದು ಪತ್ರಿಕೆಯನ್ನು ಸಿದ್ಧಪಡಿಸಿ ಪ್ರಕಟಿಸಿದರು.

ರಾಧಾ ಪತ್ರಿಕೆಯನ್ನು ನೋಡಿದಳು. ಕುತೂಹಲದಿಂದ ಓದಲು ಮುಂದಾದಳು. ಕೆಲವು ಲೇಖನಗಳನ್ನು ಸರಾಗವಾಗಿ ಓದಿದಳು. ಆದರೆ ಕೆಲವು ಲೇಖನಗಳನ್ನು ಓದಲು ಕಷ್ಟಪಟ್ಟಳು. ಏಕಿರಬಹುದು? ಹೇಳಬಲ್ಲೆಯಾ? ಹಾಗಿದ್ದರೆ ಮೊದಲಿಗೆ ಈ ಪತ್ರಿಕೆಯನ್ನು ಓದು.

@KTBS NOT TO BE REPUBLISHED





## ಮಾವು

ಮಾವು ಹಣ್ಣುಗಳ ರಾಜ ಇದರಲ್ಲಿ ಬಾದಾಮಿ, ಕಸಿ, ಮಲಗೋಬ ಮುಂತಾದ ವಿಧಗಳಿವೆ.

— ಯೂಸುಫ್, 4ನೇ ತರಗತಿ

## ಚುಟುಕು

ಚಿಕ್ಕ ಮಕ್ಕಳಿಗೆ ಶಶಿ ಬಾನಂಗಳದ ಚೆಂಡು,
ವಿಜ್ಞಾನಿಗಳಿಗೆಲ್ಲ ಬರಿ ಕಲ್ಲು ಗುಂಡು

ಸಂ — ಜಾಹ್ನವಿ 3ನೇ ತರಗತಿ


## ಸುಭಾಷಿತ

ತ್ಯಾಗ, ಪ್ರೀತಿ, ಕರುಣೆ ಮತ್ತು ಪ್ರಾಮಾಣಿಕತೆಯೇ ನಿಜವಾದ ಶಿಕ್ಷಣ

— ಸ್ವಾಮಿ ವಿವೇಕಾನಂದ

ಸಂ — ಜಾವೆದ್ 5ನೇ ತರಗತಿ

## ಚಿತ್ರಕ್ಕೆ ಬಣ್ಣ ಹಾಕಿ.



ಚಿತ್ರ ಸಂಗ್ರಹ : ವಿನಾಯಕ, 3ನೇ ತರಗತಿ

## ನುಡಿಗಟ್ಟು – ಅರ್ಥ

ಎಳ್ಳಷ್ಟು – ಅತ್ಯಲ್ಪ
ಕಂಬಿ ಕೀಳು – ಓಡಿ ಹೋಗು

— ವಿವೇಕ್, 5ನೇ ತರಗತಿ

## ವ್ಯವಕಲನ ಮಾಡು – ಗುಣಲಬ್ಧ ತಿಳಿ!

ಉದಾ: 36 × 9 = 324


- 36 ರ ಮುಂದೆ ಸೊನ್ನೆ ಸೇರಿಸಬೇಕು; 360
- 36 ನ್ನು ಕಳೆ – 36

ಉಳಿಕೆ (ಇದು 36×9 ರ ಗುಣಲಬ್ಧ) 324

ಗಮನಕ್ಕೆ: 9 ರಿಂದ ಗುಣಿಸಬೇಕಾದ ಯಾವುದೇ ಸಂಖ್ಯೆಯ ಗುಣಲಬ್ಧ ತಿಳಿಯಲು ಈ ಕ್ರಮ ಅನುಸರಿಸಿ ನೋಡು

ಹರ್ಷಿನಿ 5ನೇ ತರಗತಿ

## ಚಿತ್ರಗಳಲ್ಲಿ ವ್ಯತ್ಯಾಸ ಗುರುತಿಸಿ



@KTBS NOT TO BE REPUBLISHED

ನಿಮಗಿದು ತಿಳಿದಿರಲಿ

ಸರ್. ಎಂ. ವಿಶ್ವೇಶ್ವರಯ್ಯನವರು ರೂಪಿಸಿದ ಯೋಜನೆಯಿಂದ ಮಂಡ್ಯ ಜಿಲ್ಲೆಯ ಶ್ರೀ ರಂಗ ಪಟ್ಟಣ ತಾಲ್ಲೂಕಿನಲ್ಲಿ ಕೃಷ್ಣರಾಜ ಅಣೆಕಟ್ಟು ಕಟ್ಟಲಾಗಿದೆ. ಇದರಿಂದ ಆ ಭಾಗದ ರೈತರಿಗೆ ತುಂಬಾ ಅನುಕೂಲವಾಗಿದೆ.

– ಮಾಲ ೪ನೇ ತರಗತಿ



ಜಲಪಾತ

ಜೋಗ ಜಲಪಾತ ಲೋಕ ವಿಖ್ಯಾತ. ಕನ್ನಡ ನಾಡಿನ ಹೆಮ್ಮೆಯ ತಾಣ. ಮಲೆನಾಡಿನ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಜೋಗ್ ಹಳ್ಳಿಯಲ್ಲಿ ಇದೆ.

– ಪ್ರತೀಕ್ 5 ನೇ ತರಗತಿ.



ಸ್ವಾಮಿ ವಿವೇಕಾನಂದ

ವಿವೇಕಾನಂದರು ಹಿಂದೂ ಧರ್ಮದ ಹಿರಿಮೆಯನ್ನು ಜಗತ್ತಿಗೆ ಸಾರಿದರು. ಇವರ ಬಾಲ್ಯದ ಹೆಸರು ನರೇಂದ್ರ. ತಂದೆ ವಿಶ್ವನಾಥ ದತ್ತ. ತಾಯಿ ಭುವನೇಶ್ವರಿ ದೇವಿ.

– ವಿನಾಯಕ 3 ನೇ ತರಗತಿ

ನಾಡಹಬ್ಬ

ನಮ್ಮ ನಾಡ ಹಬ್ಬ ದಸರಾ. ಇದಕ್ಕೆ ಶರನ್ನವರಾತ್ರಿ ಎಂದು ಕರೆಯುತ್ತಾರೆ. ಮೈಸೂರು ದಸರಾ ರಾಜ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ. ಇಲ್ಲಿನ ಜಂಬೂ ಸವಾರಿ ಆಕರ್ಷಣೀಯ

–ಧಾಮಿನಿ 5ನೇ ತರಗತಿ

ಗಾದೆ

ದುಡಿದವನಿಗೆ ದುಃಖವಿಲ್ಲ
ಸೋಮಾರಿಗೆ ಸುಖವಿಲ್ಲ

–ಬೇಗಂ, 3ನೇ ತರಗತಿ

ಮನೆ ಮದ್ದು

ತೊಳೆದ ಸೀಬೆ ಹಣ್ಣಿನ ಎಲೆ ಮತ್ತು ಉಪ್ಪನ್ನು ನೀರಿಗೆ ಹಾಕಿ ಕುದಿಸಬೇಕು. ಕುದಿಸಿದ ನೀರನ್ನು ಹಿತವಾದ ಶಾಖದಲ್ಲಿ ಮುಕ್ಕಳಿಸಿದರೆ ಹಲ್ಲು ನೋವು ಶಮನವಾಗುತ್ತದೆ.

– ಗಾಯತ್ರಿ, 5ನೇ ತರಗತಿ

@KTBS NOT TO BE REPUBLISHED

“ರಾಧಾ ನೀನು ಕೆಲವು ಲೇಖನಗಳನ್ನು ಓದಲು ಕಷ್ಟಪಟ್ಟೆ ಏಕೆ?” ಎಂದು ಶಿಕ್ಷಕಿ ಪ್ರಶ್ನಿಸಿದರು. “ಕೆಲವರ ಕೈಬರೆಹ ಚೆನ್ನಾಗಿರಲಿಲ್ಲ. ಆದ್ದರಿಂದ ಓದಲು ಕಷ್ಟವಾಯಿತು ಮೇಡಂ” ಎಂದು ರಾಧಾ ಹೇಳಿದಳು. “ಬರೆಹ ಚೆನ್ನಾಗಿರಲಿಲ್ಲ ಎಂದರೆ ಅದು ಹೇಗಿತ್ತು?” ಎಂದು ಶಿಕ್ಷಕಿ ಕೇಳಿದರು.

“ಮಾಲಾ ಬರೆದಿರುವುದು ಸ್ಪಷ್ಟವಾಗಿ ಕಾಣಿಸುತ್ತಿಲ್ಲ ಮೇಡಂ. ಆದರೆ ಗಾಯತ್ರಿ ಬರೆದಿರುವ ಅಕ್ಷರಗಳು ಮುದ್ರಿತ ಆಕಾರದಲ್ಲಿಲ್ಲ, ಇನ್ನು ಯೂಸುಫ್‌ನು ತನ್ನ ಬರೆಹದಲ್ಲಿ

ಪದಗಳ ನಡುವೆ ಸ್ಥಳವನ್ನೇ ಬಿಟ್ಟಿಲ್ಲ" ಎಂದಳು. ಇತರರು ತಮ್ಮ ಅನಿಸಿಕೆಯನ್ನು ಹಂಚಿಕೊಂಡರು. ಶಿಕ್ಷಕಿ ಚರ್ಚೆಯಲ್ಲಿ ಬಂದ ಅಭಿಪ್ರಾಯವನ್ನು ಒಟ್ಟುಗೂಡಿಸಿದರು. ಬರೆವಣಿಗೆಯು ಚೆನ್ನಾಗಿರಬೇಕಾದರೆ ಅದು ಹೇಗಿರಬೇಕು ಎನ್ನುವ ಬಗ್ಗೆ ತಿಳಿಸುತ್ತಾ...

ನಾವು ತಪ್ಪಿಲ್ಲದೆ ಚೆನ್ನಾಗಿ ಕಾಣುವ ರೀತಿಯಲ್ಲಿ ಬರೆಯಬೇಕು. ಸುಲಭವಾಗಿ ಓದಲು ಮತ್ತು ಓದಿದ್ದು ಅರ್ಥವಾಗುವಂತೆ ಬರೆಯಬೇಕು. ಅಕ್ಷರಗಳನ್ನು ಒಂದೇ ಗಾತ್ರದಲ್ಲಿ ಬರೆಯಬೇಕು. ಬರೆಯುವ ಪ್ರತಿ ಅಕ್ಷರವು ಮುದ್ರಿತ ಅಕ್ಷರಗಳ ಆಕಾರದಲ್ಲಿ ಇರಬೇಕು. ಒಂದು ಪದದಲ್ಲಿನ ಅಕ್ಷರಗಳು ಒಂದಕ್ಕೊಂದು ತಾಕದಂತೆ ಹಾಗೂ ನಡುವೆ ಸ್ಥಳ ಬಿಡದಂತೆ ಬರೆಯಬೇಕು. ಪದಗಳನ್ನು ಗುರ್ತಿಸಲು ಸಹಾಯವಾಗುವಂತೆ ಪದಗಳ ನಡುವೆ ಸ್ವಲ್ಪ ಸ್ಥಳವನ್ನು ಬಿಟ್ಟು ಬರೆಯಬೇಕು. ಒಂದು ಸಾಲಿನ ಅಕ್ಷರಗಳು ಮತ್ತೊಂದು ಸಾಲಿನ ಅಕ್ಷರಗಳಿಗೆ ತಾಗದಂತೆ ಸಾಲುಗಳ ನಡುವೆ ಸೂಕ್ತ ಸ್ಥಳವನ್ನು ಬಿಟ್ಟು ಬರೆಯಬೇಕು. ಅಕ್ಷರ ಹಾಗೂ ಸಾಲುಗಳು ಓರೆಯಾಗಿರಬಾರದು ಎಂದು ಹೇಳಿದರು. ವಿದ್ಯಾರ್ಥಿಗಳು ಚೆನ್ನಾಗಿ ಬರೆಯುವ ಕ್ರಮ ತಿಳಿದು ಸಂತಸಗೊಂಡರು.

## ಪದಗಳ ಅರ್ಥ

© KTBS NOT TO BE REPUBLISHED

ಲೇಖನ – ಬರೆವಣಿಗೆ, ಬರೆಹ; ಪರಿಶೀಲಿಸು – ಸೂಕ್ಷ್ಮವಾಗಿ ಗಮನಿಸು; ಉತ್ತಮ – ಶ್ರೇಷ್ಠ; ಪ್ರಕಟಿಸು – ಗ್ರಂಥ, ಲೇಖನ ಮುಂತಾದುವನ್ನು ಪ್ರಕಾಶನಕ್ಕೆ ತರು; ಕುತೂಹಲ – ಅಚ್ಚರಿ; ಸರಾಗವಾಗಿ – ಸುಲಭವಾಗಿ; ಚರ್ಚೆ – ಪರ್ಯಾಲೋಚನೆ; ಸಲಹೆ – ಸೂಚನೆ ; ಸುಭಾಷಿತ – ಒಳ್ಳೆಯ ಮಾತು, ನೀತಿವಾಕ್ಯ.

## ಟಿಪ್ಪಣಿ

ಸಂಪಾದಕ ಮಂಡಳಿ : ಸುದ್ದಿಯನ್ನು ಪರಿಷ್ಕರಿಸಿ ಪ್ರಕಟಿಸುವ ತಂಡ.

ಶಾಲಾ ಪತ್ರಿಕೆ : ಶಾಲೆಯಿಂದ ಹೊರತರುವ ಪತ್ರಿಕೆ

ಸ್ವರಚಿತ : ತಾನೇ ರಚಿಸಿದ

ನಗೆಹನಿ : ನಗುವನ್ನುಂಟುಮಾಡುವ ಚುಟುಕಾದ ಮಾತು ಅಥವಾ ಬರೆಹ

ಚುಟುಕು : ಅಣಕದಿಂದ ಕೂಡಿದ ಚಿಕ್ಕ ಪದ್ಯ

ಕಪ್ಪು ಹಲಗೆ : ಬರೆಯುವುದಕ್ಕಾಗಿ ಕಪ್ಪುಬಣ್ಣ ಹಚ್ಚಿರುವ ಗೋಡೆಯ ಭಾಗ ಅಥವಾ ಹಲಗೆ.

## ಅಭ್ಯಾಸ

**ಅ) ಒಂದು ವಾಕ್ಯದಲ್ಲಿ ಉತ್ತರಿಸು.**

೧. ಶಾಲಾ ಪತ್ರಿಕೆಯ ಹೆಸರೇನು?

______________________________

೨. ನಮ್ಮ ನಾಡ ಹಬ್ಬ ಯಾವುದು?

______________________________

೩. ಹಣ್ಣುಗಳ ರಾಜ ಯಾರು?

______________________________

೪. ವಿವೇಕಾನಂದರ ಬಾಲ್ಯದ ಹೆಸರೇನು?

______________________________

೫. ಜೋಗ ಜಲಪಾತ ಎಲ್ಲಿದೆ?

______________________________

೬. ಈ ಪತ್ರಿಕೆಯಲ್ಲಿ ಸತೀಶ ಬರೆದಿರುವ ಲೇಖನದ ಹೆಸರೇನು?

______________________________

೭. ಚಿಗುರು ಪತ್ರಿಕೆಯಲ್ಲಿ ನಿನಗೆ ಇಷ್ಟವಾದ ಬರೆಹ ಯಾವುದು?

______________________________

©KTBS NOT TO BE REPUBLISHED

**ಆ) ಹೊಂದಿಸಿ ಬರೆ.**

| ಲೇಖಕರ ಹೆಸರು | ಲೇಖನದ ಹೆಸರು | |
|---|---|---|
| ೧. ಮಾಲ | ೧. ಸ್ವಾಮಿ ವಿವೇಕಾನಂದ | ____________ |
| ೨. ಥಾಮಸ್ | ೨. ನಿಮಗಿದು ತಿಳಿದಿರಲಿ | ____________ |
| ೩. ಬೇಗಂ | ೩. ನಾಡ ಹಬ್ಬ | ____________ |
| ೪. ವಿನಾಯಕ | ೪. ಗಾದೆ | ____________ |

## ಸಾಮರ್ಥ್ಯಾಧಾರಿತ ಚಟುವಟಿಕೆ

**ಅ) ಈ ಹೇಳಿಕೆಗಳಲ್ಲಿ ಸರಿಯಾದುದಕ್ಕೆ ಸರಿ ಗುರುತನ್ನು (✓), ತಪ್ಪಾಗಿದ್ದರೆ ತಪ್ಪು ಗುರುತನ್ನು (×) ಹಾಕು.**

೧. ತಪ್ಪಿಲ್ಲದೆ ಚೆನ್ನಾಗಿ ಕಾಣುವ ರೀತಿಯಲ್ಲಿ ಬರೆಯಬೇಕು. (   )

೨. ಸುಲಭವಾಗಿ ಓದಲು ಮತ್ತು ಓದಿದ್ದು ಅರ್ಥವಾಗುವಂತೆ ಬರೆಯಬೇಕು. (   )

೩. ಪದಗಳಲ್ಲಿನ ಅಕ್ಷರಗಳನ್ನು ಒಂದೇ ಗಾತ್ರದಲ್ಲಿ ಬರೆಯಬಾರದು. (   )

೪. ಪದದಲ್ಲಿನ ಅಕ್ಷರಗಳು ಒಂದಕ್ಕೊಂದು ತಾಕದಂತೆ ಹಾಗೂ ನಡುವೆ ಸ್ಥಳ ಬಿಡದಂತೆ ಬರೆಯಬೇಕು. (   )

೫. ಪದಗಳ ನಡುವೆ ಸ್ಥಳವನ್ನು ಬಿಡದೆ ಬರೆಯಬೇಕು. (   )

೬. ಅಕ್ಷರ ಹಾಗು ಸಾಲುಗಳು ಓರೆಯಾಗಿರಬಾರದು. (   )

**ಆ) ಈ ಸಾಲುಗಳನ್ನು ಸರಿಯಾದ ರೀತಿಯಲ್ಲಿ ಬರೆ.**

೧. ನಾಡ ನಮ್ಮ ಹಬ್ಬ ದಸರಾ : ______________________

೨. ಮಾತು ಜಗಳವಿಲ್ಲ ಬಲ್ಲವನಿಗೆ : ______________________

೩. ರಾಜ್ಯ ನಮ್ಮ ಕರ್ನಾಟಕ : ______________________

೪. ಹಣ್ಣುಗಳ ಮಾವು ರಾಜ : ______________________

**ಇ) ಚಿಗುರು ಪತ್ರಿಕೆಯಲ್ಲಿರುವ ಸುಭಾಷಿತವನ್ನು ನೀನು ಒಂದು ಅಂಕಣದಲ್ಲಿ ಬರೆ. ಮತ್ತೊಂದರಲ್ಲಿ ಸ್ನೇಹಿತರಿಂದ ಬರೆಸು. ನಂತರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.**

ನಿನ್ನ ಹೆಸರು : ______________________

______________________

ಗೆಳೆಯ/ಗೆಳತಿಯ ಹೆಸರು : ______________________

______________________

NOT TO BE REPUBLISHED @KTBS

೧. ಯಾರ ಬರೆಹ ಚೆನ್ನಾಗಿದೆ?

______________________________

೨. ಬರೆಹ ಚೆನ್ನಾಗಿದೆ ಎನ್ನಲು ಒಂದು ಕಾರಣ ಕೊಡು.

______________________________

೩. ಬರೆಹ ಚೆನ್ನಾಗಿಲ್ಲ ಎನ್ನಲು ಒಂದು ಕಾರಣ ಕೊಡು.

______________________________

**ಈ) ಈ ವಾಕ್ಯಗಳನ್ನು ನಕಲು ಮಾಡು.**


**ಕೋಗಿಲೆಯ ಗಾನ ಇಂಪು** **ಮಾಡಿದ್ದುಣ್ಣೊ ಮಹಾರಾಯ**

______________________________

______________________________

______________________________

**ಉ) ಈ ಕಮಾನಿನಲ್ಲಿ ನಿನ್ನ ಹೆಸರನ್ನು ಬರೆ.**



@KTBS NOT TO BE REPUBLISHED

**ಊ) ಚುಕ್ಕಿ ಚಿನ್ನ–ಶಾಲಾ ಪತ್ರಿಕೆಗೆ ೩ ಸಾಲುಗಳ ಒಂದು ಲೇಖನವನ್ನು ಶುದ್ಧ ಬರೆಹದಲ್ಲಿ ಬರೆ.**

______________________________

______________________________


______________________________

**ನಿನಗಿದು ತಿಳಿದಿರಲಿ :**

- ಕೈ ಬರೆಹದ ಒಂದು ಪದದಲ್ಲಿನ ಯಾವುದೇ ಅಕ್ಷರವನ್ನು ಗುರುತಿಸಲು ಸಾಧ್ಯವಾಗದಿದ್ದಾಗ ಆ ಅಕ್ಷರದ ಹಿಂದಿನ, ಮುಂದಿನ ಅಕ್ಷರಗಳನ್ನು ಆಧರಿಸಿ ಅದು ಯಾವ ಅಕ್ಷರ ಎಂದು ಗುರುತಿಸಬಹುದು.
- ವಾಕ್ಯದಲ್ಲಿನ ಒಂದು ಪದ ಗೊತ್ತಾಗದಿದ್ದರೆ ಆ ಪದದ ಹಿಂದಿನ, ಮುಂದಿನ ಪದಗಳನ್ನು ಆಧರಿಸಿ ಅದು ಯಾವ ಪದ ಎಂದು ಗುರುತಿಸಬಹುದು.
- ಒಂದು ವಾಕ್ಯವೇ ಗೊತ್ತಾಗದಿದ್ದರೆ, ಆ ವಾಕ್ಯದ ಹಿಂದಿನ, ಮುಂದಿನ ವಾಕ್ಯದ ಸಹಾಯದಿಂದ ಗುರುತಿಸಬಹುದು.

## ಭಾಷಾಭ್ಯಾಸ

ಅ) ಈ ಚಿತ್ರಗಳನ್ನು ನೋಡಿ ನಿನಗನಿಸಿದ್ದನ್ನು ಅರ್ಥಪೂರ್ಣ ವಾಕ್ಯದಲ್ಲಿ ಬರೆ.

| | |
|---|---|
| ಮಾದರಿ :  | ಹುಡುಗಿ ನೀರನ್ನು ಕುಡಿಯುತ್ತಿದ್ದಾಳೆ. |
|  | ______________________<br>______________________ |
|  | ______________________<br>______________________ |
|  | ______________________<br>______________________ |
|  | ______________________<br>______________________ |
|  | ______________________<br>______________________ |

@KTBS
NOT TO BE REPUBLISHED

## ಭಾಷಾ ಚಟುವಟಿಕೆ

**ಅ) ಗಾದೆಗಳನ್ನು ಓದಿ ತಿಳಿ.**

೧. ಆಪತ್ತಿಗಾದವನೇ ನೆಂಟ

೨. ಮಾತು ಬೆಳ್ಳಿ ಮೌನ ಬಂಗಾರ

೩. ಅತಿ ಆಸೆ ಗತಿ ಕೇಡು

೪. ಆಳಾಗಿ ದುಡಿ ಅರಸಾಗಿ ಉಣ್ಣು

**ಆ) ಸರಿಯಾದ ಪದವನ್ನು ಆರಿಸಿ ಗಾದೆಯನ್ನು ಪೂರ್ಣಮಾಡು.**

(ಯುಕ್ತಿ ಮೇಲು, ಜುಟ್ಟಿಗೆ ಮಲ್ಲಿಗೆ ಹೂ, ಕೋಣ ನೀರಿಗೆ ಎಳೆಯುತ್ತೆ, ಮಹಾರಾಯ)

೧. ಮಾಡಿದ್ದುಣ್ಣೊ ____________________

೨. ಎತ್ತು ಏರಿಗೆ ಎಳೆದರೆ ____________________

೩. ಹೊಟ್ಟೆಗೆ ಹಿಟ್ಟಿಲ್ಲ ____________________

೪. ಶಕ್ತಿಗಿಂತ ____________________

**ಇ) ಈ ಪದಗಳನ್ನು ಸರಿಯಾದ ರೂಪದಲ್ಲಿ ಬರೆ.**

ಕೂತುಹಲ – ________________ ಸಿಕ್ಷಕ – ________________

ಜಾಲಪಾತ – ________________ ನಿಡುಗಟ್ಟು – ________________

**ನಿನಗಿದು ತಿಳಿದಿರಲಿ :** ಗಾದೆ ಎಂದರೆ ನಾಣ್ಣುಡಿ.

@KTBS NOT TO BE REPUBLISHED



ಪಾಠ ೬

# ಈಸೂರ ಸ್ವಗತ

– ಸಮಿತಿ ರಚನೆ

K7N7L7

**ಸಾಮರ್ಥ್ಯ :** ಅಕ್ಷರಗಳನ್ನು ಮತ್ತು ಪದಗಳನ್ನು ಸರಿಯಾದ ವಿನ್ಯಾಸ, ಅನುಕ್ರಮಣಿಕೆ ಹಾಗೂ ಸೂಕ್ತ ಅಂತರದೊಂದಿಗೆ ಬರೆಯುವುದು..

## ಪ್ರವೇಶ

- ನೀನು ವಿದ್ಯಾರ್ಥಿ. ನಿನ್ನಲ್ಲಿ ನಿನ್ನದೇ ಆದ ಕೆಲವು ವಸ್ತುಗಳಿವೆ ಅಲ್ಲವೇ? ನಿನ್ನ ವಸ್ತುಗಳನ್ನು ಯಾರಾದರೂ ಕಸಿದುಕೊಳ್ಳಲು ಬಂದರೆ ಅದನ್ನು ಯಾರು ರಕ್ಷಿಸಬೇಕು? ಏಕೆ ರಕ್ಷಿಸಬೇಕು? ಹೇಗೆ ರಕ್ಷಿಸಿಕೊಳ್ಳುವೆ?
- ನಿಮ್ಮ ಮನೆ, ಹೊಲ ಮತ್ತಿತರ ಸಾಮಗ್ರಿಗಳನ್ನು ಯಾರಾದರೂ ಕಸಿದುಕೊಳ್ಳಲು ಬಂದರೆ ನೀನು ಏನು ಮಾಡುವೆ?
- ನಿಮ್ಮ ಊರಿಗೆ ಯಾರಾದರೂ ಕೇಡು ಮಾಡಲು ಬಂದರೆ ಊರನ್ನು ಯಾರು ರಕ್ಷಿಸಬೇಕು? ಈ ಬಗ್ಗೆ ಇಲ್ಲಿನ ಹೋರಾಟವನ್ನು ಗಮನಿಸು.

@KTBS NOT TO BE REPUBLISHED



"ಏಸೂರು ಕೊಟ್ಟರೂ ಈಸೂರು ಬಿಡೆವು"

ಕೇಳಿದಿರಲ್ಲ! ನನ್ನ ಮಡಿಲ ಮಕ್ಕಳ ಧೀರ ಮಾತುಗಳನ್ನ. ಏನು? ನಾನು ಯಾರೆಂದು ತಿಳಿಯುವ ಕುತೂಹಲವೇ? ಕೇಳಿ ನಾನು ಈಸೂರು ಎಂಬ ಗ್ರಾಮ. ನಾನು ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನಲ್ಲಿದ್ದೇನೆ. ಕುಮುದ್ವತಿ ನದಿಯ ಬಲದಂಡೆಯ ಮೇಲಿರುವ

ನನ್ನ ಮಡಿಲಿನ ಮಕ್ಕಳು ತಮ್ಮದೇ ಸರ್ಕಾರ ರಚಿಸಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಿದ ಸ್ವಾತಂತ್ರ್ಯ ಪ್ರೇಮಿಗಳು, ನಾಡಿಗೆ ಕೀರ್ತಿ ತಂದವರು.

ನಮ್ಮನ್ನು ಬ್ರಿಟಿಷರು ಆಳುತ್ತಿದ್ದ ಕಾಲ. ನಾವು ಅವರ ಗುಲಾಮರಾಗಿ, ತುಂಬಾ ನೋವು, ಹಿಂಸೆ ಅನುಭವಿಸಬೇಕಾಗಿತ್ತು. ಬ್ರಿಟಿಷರನ್ನು ಭಾರತದಿಂದ ಓಡಿಸಬೇಕು, ನಾವು ಸ್ವತಂತ್ರರಾಗಬೇಕು ಎಂಬ ಛಲ ಭಾರತೀಯರಲ್ಲಿ ಮೂಡಿತು. ಮಹಾತ್ಮ ಗಾಂಧಿಯವರು "ಬ್ರಿಟಿಷರೇ, ಭಾರತ ಬಿಟ್ಟು ತೊಲಗಿ" ಎಂಬ ಚಳುವಳಿ ಆರಂಭಿಸಿದರು. ಇದರಿಂದ ಪ್ರೇರಿತರಾದ ನನ್ನ ಜನತೆ ಬ್ರಿಟಿಷ್ ಸರ್ಕಾರಕ್ಕೆ ತೆರಿಗೆ ಕೊಡದಂತೆ ಚಳುವಳಿ ನಡೆಸಿದರು. ಅಧಿಕಾರಿಗಳಿಗೆ ಹೆದರದಂತೆ ಜನರಿಗೆ ಕರೆ ಕೊಟ್ಟರು. ಸರ್ಕಾರಿ ಅಧಿಕಾರಿಗಳಿಗೆ, ಕಛೇರಿಗಳಿಗೆ ಧಿಕ್ಕಾರ ಕೂಗಿದರು. ೨೫ ಸೆಪ್ಟಂಬರ್ ೧೯೪೨ರಂದು ಬ್ರಿಟಿಷ್ ಸರ್ಕಾರದ ಅಧಿಕಾರವನ್ನು ಧಿಕ್ಕರಿಸಿದರು. "ಏಸೂರು ಕೊಟ್ಟರೂ ಈಸೂರು ಬಿಡೆವು" ಎಂಬ ಜನರ ಘೋಷಣೆ ಮುಗಿಲು ಮುಟ್ಟಿತು. ನನ್ನನ್ನು 'ಸ್ವತಂತ್ರ ಹಳ್ಳಿ' ಎಂದು ಸಾರಿದರು. ತಮ್ಮದೇ ಆದ ಸರ್ಕಾರ ರಚಿಸಿಕೊಂಡು ಗ್ರಾಮದ ಆಡಳಿತ ನಡೆಸಲು ಪಣತೊಟ್ಟರು.

ಮರುದಿನ ಬ್ರಿಟಿಷ್ ಸರ್ಕಾರಿ ಅಧಿಕಾರಿಗಳಾದ ಪಟೇಲ್ ಚನ್ನಬಸವಯ್ಯ ಮತ್ತು ಶಾನುಭೋಗ ರಂಗನಾಥರಾವ್ ಕಂದಾಯದ ವಸೂಲಿಗೆ ನನ್ನಲ್ಲಿಗೆ ಬಂದರು. ಖಾತೆ-ಕಿರ್ದಿ ಪುಸ್ತಕಗಳೊಂದಿಗೆ ಕಂದಾಯ ವಸೂಲಿಗೆ ಬಂದ ಅಧಿಕಾರಿಗಳನ್ನು ಹೋರಾಟಗಾರ ಯುವಕರು ವಿರೋಧಿಸಿದರು. "ರಾಜೀನಾಮೆ ಕೊಡಿ, ಗಾಂಧಿ ಟೋಪಿ ಧರಿಸಿ" ಎಂದು ವಿನಂತಿಸಿದರು. ಮಾತಿನ ಚಕಮಕಿ ನಡೆಯಿತು. ವಿನಂತಿಗೆ ಒಪ್ಪದ ಅಧಿಕಾರಿಗಳಿಂದ ಹೋರಾಟಗಾರರು ಖಾತೆ-ಕಿರ್ದಿ ಪುಸ್ತಕಗಳನ್ನು ಕಸಿದುಕೊಂಡರು. ಅಧಿಕಾರಿಗಳು ಸೋತರು. ತಾವು ತಂದ ಪುಸ್ತಕಗಳನ್ನು ಪಡೆಯಲಾಗದೆ ಹಿಂದಿರುಗಿದರು.

ಹೋರಾಟ ಅಲ್ಲಿಗೇ ನಿಲ್ಲಲಿಲ್ಲ. ೧೯೪೨ ಸೆಪ್ಟಂಬರ್ ೨೭ ರಂದು ಸಂಜೆ ಗ್ರಾಮಸ್ಥರು ವೀರಭದ್ರ ದೇವಸ್ಥಾನದ ಮುಂದಿನ ಅಂಗಳದಲ್ಲಿ ಹಾರಿಸಿದ್ದ ಧ್ವಜದ ಕೆಳಗೆ ಗುಪ್ತ ಸಭೆ ನಡೆಸಿದರು. ಭವಿಷ್ಯದ ಪ್ರಜೆಗಳಾದ ಮಕ್ಕಳನ್ನು ಒಳಗೊಂಡ ತಮ್ಮದೇ ಸರ್ಕಾರವನ್ನು ರಚಿಸಿ ನನ್ನ ರಕ್ಷಣೆಗೆ ನಿಂತರು. ಮಕ್ಕಳಾದ ಸಾಹುಕಾರ್ ಜಯಣ್ಣನನ್ನು ಅಮಲ್ದಾರನನ್ನಾಗಿಯೂ, ಮಲ್ಲಪ್ಪಯ್ಯನನ್ನು ಪೋಲೀಸ್ ಅಧಿಕಾರಿಯನ್ನಾಗಿಯೂ ನೇಮಿಸಿದರು. ಇವರೊಂದಿಗೆ ಇತರೆ ಮಕ್ಕಳೂ ಸೇರಿಕೊಂಡರು. ಊರಿನ ಅಗಸೆ ಬಾಗಿಲಿನಲ್ಲಿ "ಬೇಜವಾಬ್ದಾರಿ ಸರ್ಕಾರಿ ಅಧಿಕಾರಿಗಳಿಗೆ ಈಸೂರಿನಲ್ಲಿ ಪ್ರವೇಶವಿಲ್ಲ" ಎಂಬ ಫಲಕವನ್ನು ತೂಗುಹಾಕಿದರು. ಅಲ್ಲೇ ಕಛೇರಿಯನ್ನು ಪ್ರಾರಂಭಿಸಿದರು. ಗಮನಿಸಿದಿರಾ ನನ್ನ ಮಡಿಲಿನ ಮಕ್ಕಳ ಸಾಹಸವನ್ನು?

@KTBS NOT TO BE REPUBLISHED

ಖಾತೆ–ಕಿರ್ದಿ ಪುಸ್ತಕವನ್ನು ಪಡೆಯಲು ಪಟೇಲ್ ಚನ್ನಬಸವಯ್ಯ ಮತ್ತು ಶಾನುಭೋಗ ರಂಗನಾಥರಾವ್ ಮತ್ತೆ ಬಂದರು. ಮಕ್ಕಳಿಂದ ರಚನೆಯಾದ ಹೊಸ ಸರ್ಕಾರದ ಅಧಿಕಾರಿಗಳು ಅವರಿಬ್ಬರನ್ನು ತಡೆದರು. ರಾಜೀನಾಮೆ ಕೊಟ್ಟು, ಗಾಂಧಿ ಟೋಪಿ ಹಾಕಿಕೊಂಡು, ತಾವು ರಚಿಸಿದ ಸರ್ಕಾರದಲ್ಲಿ ಕೆಲಸ ಮಾಡಬೇಕೆಂದು ಅವರಿಗೆ ಆಜ್ಞೆ ಮಾಡಿದರು. ಇದಕ್ಕೆ ಅವರು ಒಪ್ಪಲಿಲ್ಲ. ಅವರಿಗೆ ಐವತ್ತು ರೂಪಾಯಿ ದಂಡ ವಿಧಿಸಲಾಯಿತು. ದಂಡ ಕಟ್ಟದ ಅವರಿಗೆ ಮೂರು ಗಂಟೆ ಕಾಲ ಒಂಟಿ ಕಾಲಿನಲ್ಲಿ ನಿಲ್ಲುವಂತೆ ಶಿಕ್ಷೆ ವಿಧಿಸಲಾಯಿತು. ಇದರಿಂದ ನನ್ನ ಮಡಿಲಿನ ಮಕ್ಕಳು ಅನುಭವಿಸಿದ ನೋವನ್ನು ನಿಮಗೆ ಹೇಳಲೇಬೇಕು.



NOT TO BE REPUBLISHED

ನನ್ನ ಮಕ್ಕಳ ಈ ಸಾಹಸವನ್ನು ತಿಳಿದ ಬ್ರಿಟಿಷ್ ಅಧಿಕಾರಿಗಳು ಕೋಪಗೊಂಡರು. ತಾಲ್ಲೂಕಿನ ಅಮಲ್ದಾರರು, ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಯೊಂದಿಗೆ ಗ್ರಾಮಕ್ಕೆ ದಾಳಿಯಿಟ್ಟರು. ಬ್ರಿಟಿಷ್ ಅಧಿಕಾರಿಗಳು ಗ್ರಾಮ ಪ್ರವೇಶಿಸದಂತೆ ಜನರು ಪ್ರತಿಭಟಿಸಿದರು. ಕೋಪಗೊಂಡ ಅಧಿಕಾರಿಗಳು ನಿರಾಯುಧ ಜನರ ಮೇಲೆ ಲಾಠಿ ಬೀಸಿದರು. ಸಿಕ್ಕವರನ್ನೆಲ್ಲ ಚಚ್ಚಿದರು. ರೊಚ್ಚಿಗೆದ್ದ ಜನರ ಪ್ರತಿಭಟನೆ ಹೆಚ್ಚಾಯಿತು. "ಏಸೂರು ಕೊಟ್ಟರೂ ಈಸೂರು ಬಿಡೆವು" ಎಂಬ ಘೋಷಣೆ ಮತ್ತೊಮ್ಮೆ ಮುಗಿಲು ಮುಟ್ಟಿತು. ಪೊಲೀಸರು ತಾಳ್ಮೆ ಕಳೆದುಕೊಂಡು, ಜನರ ಮೇಲೆ ಗುಂಡು ಹಾರಿಸಿದರು. ರೊಚ್ಚಿಗೆದ್ದ ನಮ್ಮ ಜನರು ಅವರ ಮೇಲೆ ಮುಗಿಬಿದ್ದರು. ಅಮಲ್ದಾರ ಚನ್ನಕೃಷ್ಣಪ್ಪ ಮತ್ತು ಪೊಲೀಸ್ ಅಧಿಕಾರಿ ಕೆಂಚೇಗೌಡ ಸತ್ತರು.

ಬ್ರಿಟಿಷ್ ಸರ್ಕಾರಕ್ಕೆ ವಿಷಯ ಮುಟ್ಟಿತು. ಹೆಚ್ಚಿನ ಪೊಲೀಸ್ ಮತ್ತು ಸೈನ್ಯದಳವನ್ನು ಕಳಿಸಿ ಈಸೂರನ್ನು ಲೂಟಿ ಮಾಡಿಸಿತು. ಹೆಂಗಸರು ಮಕ್ಕಳೆನ್ನದೆ ಅನೇಕರು ಚಿತ್ರಹಿಂಸೆಗೆ ಗುರಿಯಾದರು. ಸರ್ಕಾರದ ವಿರುದ್ಧ ಬಂಡೆದ್ದರೆಂದು ಹಲವರ ವಿರುದ್ಧ

ಮೊಕದ್ದಮೆ ಹೂಡಲಾಯಿತು. ಮುಂದೆ ಆ ವೀರರಲ್ಲಿ ಐವರು ಮರಣದಂಡನೆಗೆ ಗುರಿಯಾದರು.

ನನ್ನ ಜನರ ಸ್ವಾತಂತ್ರ್ಯ ಪ್ರೇಮ ಹಾಗೂ ಮಕ್ಕಳ ಧೈರ್ಯವು ಕನ್ನಡಿಗರ ಮನೆ ಮಾತಾಯಿತು. ಇಡೀ ಭಾರತದಲ್ಲೇ ಸ್ವಾತಂತ್ರ್ಯ ಪೂರ್ವದಲ್ಲಿ ಮೊಟ್ಟ ಮೊದಲಿಗೆ 'ಸ್ವತಂತ್ರ ಹಳ್ಳಿ', ಎಂಬ ಹೆಸರನ್ನು ಪಡೆದ ನಾನೇ ಧನ್ಯ.

## ಪದಗಳ ಅರ್ಥ

ಏಸೂರು–ಎಷ್ಟು ಊರು; ದಂಡೆ–ದಡ; ತೊಲಗು–ಹೋಗು; ಚಳುವಳಿ–ಹೋರಾಟ; ಪ್ರೇರಿತ–ಪ್ರಚೋದಿತ; ತೆರಿಗೆ–ಕರ, ಕಂದಾಯ; ಧಿಕ್ಕರಿಸು–ತಿರಸ್ಕರಿಸು; ಪ್ರತಿಭಟನೆ–ವಿರೋಧ; ನಿರಾಯುಧ–ಆಯುಧವಿಲ್ಲದೆ; ಲಾಠಿ–ಬಿದಿರಿನ ಕೋಲು; ರೊಚ್ಚಿಗೆದ್ದ–ಕೋಪಗೊಂಡ; ಘೋಷಣೆ–ಗಟ್ಟಿಯಾಗಿ ಕೂಗು; ಲೂಟಿ–ದೋಚು; ಬಂಡೇಳು–ದಂಗೆ; ಧೃತಿಗೆಡು–ಧೈರ್ಯಗುಂದು; ಫಲಕ–ಬರಹದ ಹಲಗೆ; ಆಜ್ಞೆ–ಆದೇಶ; ದಂಡ–ಜುಲ್ಮಾನೆ; ಹರಸು–ಆಶೀರ್ವದಿಸು; ಕಲಿಗಳು–ವೀರರು; ಅಗಸೆ–ಊರ ಮುಂದಿನ ಹೆಬ್ಬಾಗಿಲು/ಮುಖ್ಯದ್ವಾರ.

## ಟಿಪ್ಪಣಿ

NOT TO BE REPUBLISHED @KTBS

| | |
|---|---|
| ಸ್ವಾತಂತ್ರ್ಯಪೂರ್ವ | : ದೇಶ ಸ್ವತಂತ್ರವಾಗುವುದಕ್ಕೆ ಮುನ್ನ |
| ಸ್ವತಂತ್ರ ಹಳ್ಳಿ | : ಪರಕೀಯರ ಆಡಳಿತದಿಂದ ಬಿಡುಗಡೆ ಹೊಂದಿದ ಗ್ರಾಮ. |
| ಖಾತೆ–ಕಿರ್ದಿ | : ಮನೆ, ಭೂಮಾಲೀಕರ ವಿವರವಿರುವ ಕಂದಾಯ ದಾಖಲೆ ಪುಸ್ತಕ. |
| ಬಲಿದಾನ | : ಒಳಿತಿಗಾಗಿ ಮಾಡುವ ಜೀವದಾನ |
| ಕಂದಾಯ | : ಮನೆ, ಭೂಮಿ, ವ್ಯಾಪಾರ, ವೃತ್ತಿ ಇತ್ಯಾದಿ ಗಳಿಕೆಯ ಮೇಲೆ ಸರ್ಕಾರ ವಿಧಿಸುವ ತೆರಿಗೆ. |
| ಮೊಕದ್ದಮೆ | : ಆಪಾದನೆಯನ್ನು ಆಧರಿಸಿ ಆಪಾದಿತನ ಮೇಲೆ ಆರೋಪ ಪಟ್ಟಿ ಸಿದ್ಧತೆ. |
| ಅಮಲ್ದಾರ | : ತಾಲ್ಲೂಕಿನ ಭೂ ಕಂದಾಯ ಮುಂತಾದ ತೆರಿಗೆ ವಸೂಲು ಮಾಡಲು ಗೊತ್ತುಪಡಿಸಿರುವ ಅಧಿಕಾರಿ (ಈಗಿನ ತಹಸೀಲ್ದಾರ) |
| ಮುಕ್ತಕಂಠ | : ಸಂಕೋಚವಿಲ್ಲದೆ ನೇರವಾಗಿ ಹೇಳುವುದು |
| ಸ್ವಗತ | : ತನಗೆ ತಾನೇ ಹೇಳಿಕೊಳ್ಳುವುದು |

## ಅಭ್ಯಾಸ

**ಅ) ಒಂದು ವಾಕ್ಯದಲ್ಲಿ ಉತ್ತರಿಸು.**

೧. ಈಸೂರು ಯಾವ ಜಿಲ್ಲೆಯಲ್ಲಿದೆ?

೨. ಗಾಂಧೀಜಿಯವರು ಆರಂಭಿಸಿದ ಚಳುವಳಿ ಯಾವುದು?

೩. ಈಸೂರಿನ ಜನತೆ ಯಾರ ಅಧಿಕಾರವನ್ನು ಧಿಕ್ಕರಿಸಿದರು?

೪. ಈಸೂರಿನ ಜನತೆ ತಮ್ಮ ಹಳ್ಳಿಯನ್ನು ಏನೆಂದು ಘೋಷಿಸಿದರು?

೫. ಈಸೂರು ಜನರ ಘೋಷಣೆ ಏನು?

೬. ಸ್ಥಳೀಯ ಸರ್ಕಾರದ ಅಮಲ್ದಾರ ಮತ್ತು ಪೋಲೀಸ್ ಅಧಿಕಾರಿಯ ಹೆಸರೇನು?

೭. ಅಗಸೆ ಬಾಗಿಲಿನಲ್ಲಿ ಹಾಕಿದ್ದ ಫಲಕದಲ್ಲಿ ಏನೆಂದು ಬರೆದಿತ್ತು?

೮. ಹೊಸ ಸರ್ಕಾರದ ಅಧಿಕಾರಿಗಳು ಬ್ರಿಟಿಷ್ ಅಧಿಕಾರಿಗಳಿಗೆ ನೀಡಿದ ಆಜ್ಞೆ ಏನು?

೯. ಸ್ವಗತ ಎಂದರೇನು?

**ಆ) ಕಾರಣ ಕೊಡು.**

೧. ಈಸೂರು ಶಿವಮೊಗ್ಗ ಜಿಲ್ಲೆಗೆ ಹೆಸರು ತಂದಿತು.

©KTBS NOT TO BE REPUBLISHED

೨. ಹೊಸ ಸರ್ಕಾರದಲ್ಲಿ ಮಕ್ಕಳನ್ನು ಅಧಿಕಾರಿಗಳನ್ನಾಗಿ ಮಾಡಿದರು.

___________________________________

___________________________________

## ಇ) ಬಿಟ್ಟ ಸ್ಥಳವನ್ನು ಸರಿಯಾದ ಪದದಿಂದ ತುಂಬು.

೧. ಅಧಿಕಾರಿಗಳು ಕಂದಾಯ ವಸೂಲಿಗೆ __________ ಪುಸ್ತಕಗಳೊಂದಿಗೆ ಬಂದರು.

೨. ದೇವಸ್ಥಾನದ ಮುಂದೆ __________ ಸಭೆ ನಡೆಸಿದರು.

೩. ಅವರಿಗೆ ಐವತ್ತು ರೂಪಾಯಿ __________ ವಿಧಿಸಲಾಯಿತು.

## ಈ) ಸರಿ ತಪ್ಪು ಗುರುತಿಸು.

೧. ಪಟೇಲ್ ಚನ್ನಬಸವಯ್ಯ ಮತ್ತು ಶಾನುಭೋಗ ರಂಗನಾಥರಾವ್ ಸ್ವತಂತ್ರ ಸರ್ಕಾರದ ಅಧಿಕಾರಿಗಳು. (   )

೨. ಬ್ರಿಟಿಷ್ ಅಧಿಕಾರಿಗಳು ಗ್ರಾಮ ಪ್ರವೇಶಿಸದಂತೆ ಜನರು ಪ್ರತಿಭಟಿಸಿದರು. (   )

೩. ಈಸೂರಿನ ಸ್ವತಂತ್ರ ಸರ್ಕಾರದ ರಚನೆಯನ್ನು ತಿಳಿದ ಬ್ರಿಟಿಷ್ ಅಧಿಕಾರಿಗಳು ಸಂತಸಗೊಂಡರು. (   )

## ಉ) ವಿರುದ್ಧಾರ್ಥಕ ಪದಗಳನ್ನು ಹೊಂದಿಸಿ ಬರೆ.

| ಅ | ಆ | |
|---|---|---|
| ಆರಂಭ | ಹೇಡಿ | __________ |
| ಪ್ರವೇಶ | ಗೆಲುವು | __________ |
| ಸೋಲು | ನಿರ್ಗಮನ | __________ |
| ಧೀರ | ಮುಕ್ತಾಯ | __________ |

@KTBS NOT TO BE REPUBLISHED

## ಸಾಮರ್ಥ್ಯಾಧಾರಿತ ಚಟುವಟಿಕೆ

ಅ) **ಕೊಟ್ಟಿರುವ ವಾಕ್ಯಗಳನ್ನು ನಕಲು ಮಾಡು.**

"ಏಸೂರು ಕೊಟ್ಟರೂ ಈಸೂರು ಬಿಡೆವು".

______________________________

______________________________

"ಬ್ರಿಟಿಷರೇ, ಭಾರತ ಬಿಟ್ಟು ತೊಲಗಿ".

______________________________

______________________________

"ಬೇಜವಾಬ್ದಾರಿ ಅಧಿಕಾರಿಗಳಿಗೆ ಈಸೂರಿಗೆ ಪ್ರವೇಶವಿಲ್ಲ".

______________________________

______________________________

ಆ) **ಇಲ್ಲಿ ಕೊಟ್ಟಿರುವ ವಾಕ್ಯಗಳನ್ನು ಸರಿಯಾದ ಕ್ರಮದಲ್ಲಿ ಬರೆ.**

ಆಳುತ್ತಿದ್ದರು ಹಿಂದೆ ಬ್ರಿಟಿಷರು ಭಾರತವನ್ನು


______________________________________________

ಸ್ವಾತಂತ್ರ್ಯ ಈಸೂರಿನವರು ಪ್ರೇಮಿಗಳು

______________________________________________

ಇ) **ಚಿತ್ರ ನೋಡಿ ಕೊಟ್ಟಿರುವ ಪದಗಳನ್ನು ಬಳಸಿ ವಾಕ್ಯ ರಚಿಸಿ ಸೂಕ್ತ ವಿನ್ಯಾಸ ಹಾಗೂ ಅಂತರದೊಂದಿಗೆ ಬರೆ.**

(ದಾರ, ಬಟ್ಟೆ, ಹೆಂಗಸು, ಪ್ಯಾಂಟು, ಸೀರೆ, ಲಂಗ, ಒಣಗಿಸು, ಸೂರ್ಯ)



೧. ______________________________

______________________________

೨. ______________________________



______________________________

@KTBS NOT TO BE REPUBLISHED


# ಭಾಷಾಭ್ಯಾಸ

**ಅ) ಚಿತ್ರ ನೋಡಿ ಮಾದರಿಯಂತೆ ಬರೆ.**

**ಮಾದರಿ :**

| | |
|---|---|
|  |  |
| ಗಾಡಿ | ಗಾಡಿಗಳು |

| | |
|---|---|
|  |  |
| ಕುದುರೆ | |

| | |
|---|---|
|  |  |
| ಗಿಳಿ | |

@KTBS NOT TO BE REPUBLISHED

**ಆ) ಆವರಣದಲ್ಲಿ ಕೊಟ್ಟಿರುವ ಸೂಕ್ತ ಪದ ಆರಿಸಿ ಮಾದರಿಯಂತೆ ಬಹುವಚನ ಪದಗಳನ್ನು ಬರೆ.**

(ಅಣ್ಣಂದಿರು, ಚಿಕ್ಕಮ್ಮಂದಿರು, ಚಿಕ್ಕಪ್ಪಂದಿರು, ತಮ್ಮಂದಿರು, ಮಾವಂದಿರು, ಅಜ್ಜಂದಿರು)

**ಮಾದರಿ : ಅಕ್ಕ – ಅಕ್ಕಂದಿರು**

ಅಣ್ಣ – ____________ ತಮ್ಮ – ____________ ಚಿಕ್ಕಮ್ಮ – ____________

ಅಜ್ಜ – ____________ ಮಾವ – ____________ ಚಿಕ್ಕಪ್ಪ – ____________

ಇ) **ಚಿತ್ರವನ್ನು ಗಮನಿಸು. ಮಾದರಿಯಂತೆ ಒಂದಕ್ಕಿಂತ ಹೆಚ್ಚು ಇರುವುದನ್ನು ಬಹು ವಚನದಲ್ಲಿ ಬರೆ.**



**ಮಾದರಿ : ಮನೆಗಳು**

________ ________

________ ________

________ ________

**ನಿನಗಿದು ತಿಳಿದಿರಲಿ :**

- ಒಂದು ಎಂಬ ಅರ್ಥಕೊಡುವ ಪದಗಳು ಏಕವಚನ.
- ಒಂದಕ್ಕಿಂತ ಹೆಚ್ಚು ಎಂಬ ಅರ್ಥಕೊಡುವ ಪದಗಳು ಹಾಗೂ ಗೌರವ ಸೂಚಕ ಪದಗಳು ಬಹುವಚನ.

## ಭಾಷಾ ಚಟುವಟಿಕೆ

ಅ) **ಇಲ್ಲಿ ಕೊಟ್ಟಿರುವ ಕೆಲವು ಅನ್ಯ ದೇಶೀಯ ಶಬ್ದಗಳನ್ನು ಓದಿ ತಿಳಿ.**

**ಅರೇಬಿಕ್ ಪದ** : ಖಾತೆ ಕಿರ್ದಿ, ಅಮಲ್ದಾರ, ಮೊಕದ್ದಮೆ, ಕಚೇರಿ, ಕುರ್ಚಿ.

**ಇಂಗ್ಲಿಷ್** : ಸ್ಕೂಟರ್, ಬಕೆಟ್, ನಿಕ್ಕರ್, ಪ್ಯಾಂಟ್, ಬ್ಯಾಂಕ್.

**ಹಿಂದೂಸ್ಥಾನಿ** : ಟೋಪಿ, ಗಡಿಯಾರ, ಗಾಡಿ, ಗಿರಾಕಿ, ಗಾಬರಿ.

**ನಿನಗಿದು ತಿಳಿದಿರಲಿ :** ಒಂದು ಭಾಷೆಯ ಮೂಲ ಪದಗಳನ್ನು ದೇಶ್ಯ ಶಬ್ದಗಳೆಂದು, ಬೇರೆ ಭಾಷೆಗಳಿಂದ ತೆಗೆದುಕೊಂಡ ಶಬ್ದಗಳನ್ನು ಅನ್ಯದೇಶ್ಯ ಶಬ್ದಗಳೆಂದು ಕರೆಯುವರು.

ಆ) **ನುಡಿಗಟ್ಟುಗಳ ಅರ್ಥ ತಿಳಿ.**

| ನುಡಿಗಟ್ಟು | ಅರ್ಥ | ನುಡಿಗಟ್ಟು | ಅರ್ಥ |
|---|---|---|---|
| ಎತ್ತಿದ ಕೈ | – ಪ್ರವೀಣ; ನಿಪುಣ | ಎಳ್ಳಷ್ಟು | – ಅತ್ಯಲ್ಪ |
| ಕಬ್ಬಿಣದ ಕಡಲೆ | – ಕಠಿಣವಾದ ವಿಷಯ | ರೈಲುಬಿಡು | – ಸುಳ್ಳು ಹೇಳು |
| ತಲೆ ಹಾಕು | – ಮಧ್ಯೆ ಪ್ರವೇಶಿಸು | ಕಾಲುತೆಗೆ | – ಹೊರಡು |

@KTBS NOT TO BE REPUBLISHED

**ಇ) ವಾಕ್ಯದಲ್ಲಿನ ಬಿಟ್ಟ ಸ್ಥಳವನ್ನು ಹಿಂದೆ ಕೊಟ್ಟಿರುವ ನುಡಿಗಟ್ಟುಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆದು ವಾಕ್ಯ ಪೂರ್ಣ ಮಾಡು.**

೧. ರಾಜು ಕೆಲಸ ಮಾಡುವುದರಲ್ಲಿ ______________

೨. ಅವರು ಮಾತನಾಡುವಾಗ ನಾನು ಅನವಶ್ಯಕವಾಗಿ ______________

೩. ಕೆಲವರು ತಮಗೆ ಗೊತ್ತಿಲ್ಲದಿದ್ದರೂ ಸುಮ್ಮನೆ ______________

೪. ಅಮ್ಮ ಕೆಲಸ ಹೇಳಿದರೆ ನನ್ನ ತಮ್ಮ ______________

**ನಿನಗಿದು ತಿಳಿದಿರಲಿ :** ನುಡಿಗಟ್ಟು ಎಂದರೆ ವಿಶಿಷ್ಟವಾದ ಮಾತಿನ ಜೋಡಣೆ.

**ವೃತ್ತ ಪತ್ರಿಕೆಯಲ್ಲಿರುವ ಮುದ್ರಿತ ಅಕ್ಷರಗಳು, ದಪ್ಪ ಅಕ್ಷರಗಳು, ಸಣ್ಣ ಅಕ್ಷರಗಳು, ಪದಗಳನ್ನು ಕತ್ತರಿಸಿ ಅಂಟಿಸುವುದು.**

@KTBS
NOT TO BE REPUBLISHED


# ಪಾಠ ೭ ಪ್ರಾಮಾಣಿಕ ಬಾಲಕ

X4A2B3

– ಸಮಿತಿ ರಚನೆ

**ಸಾಮರ್ಥ್ಯ :** ಪಠ್ಯದಲ್ಲಿನ ಮುಖ್ಯ ವಿಷಯವನ್ನು ಗುರುತಿಸುವುದು. ಏಕೆ ಎಂಬ ಪ್ರಶ್ನೆಗೆ ಉತ್ತರಿಸುವುದು.


**ಪ್ರವೇಶ :** ಈ ಚಿತ್ರಗಳಲ್ಲಿರುವ ವ್ಯಕ್ತಿಗಳನ್ನು ಗುರುತಿಸು. ಈ ಮಹನೀಯರು ದೇಶಕ್ಕಾಗಿ ಮತ್ತು ಸಮಾಜ ಸೇವೆಗಾಗಿ ಹೋರಾಡಿದವರು. ಇವರ ಬಾಲ್ಯವನ್ನು ಹಿಂತಿರುಗಿ ನೋಡಿದರೆ ಸಹಜ ತುಂಟಾಟದ ನಡುವೆ ಕೆಲವು ಆದರ್ಶದ ಗುಣಗಳು ಕಂಡುಬರುತ್ತವೆ. ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡು ಬೆಳೆದ ಒಬ್ಬ ನೇತಾರನ ಬಾಲ್ಯ ಮತ್ತು ಬದುಕನ್ನು ತಿಳಿಯೋಣ.



ಶಾಲೆಯ ಗಂಟೆ ಬಾರಿಸಿತು. ಶಾಲೆಯಿಂದ ಹೊರ ಬಂದ ಮಕ್ಕಳೆಲ್ಲ ಮನೆಯತ್ತ ಹೊರಟರು. ದಾರಿಬದಿಯ ಮಾವಿನ ತೋಪಿನಲ್ಲಿ ಬೆಳೆದು ಪಕ್ವವಾಗಿದ್ದ ಮಾವಿನ ಹಣ್ಣುಗಳು ಮಕ್ಕಳನ್ನು ಆಕರ್ಷಿಸಿದವು. ಹಣ್ಣು ತಿನ್ನುವ ಆಸೆಯಿಂದ ಮಕ್ಕಳು ತೋಪನ್ನು ಪ್ರವೇಶಿಸಿದರು. ಕೆಲವರು ಮರವನ್ನೇರಿದರೆ ಮತ್ತೆ ಕೆಲವರು ಕಲ್ಲು ಬೀಸಿದರು. ಸಿಕ್ಕ ಹಣ್ಣುಗಳನ್ನು ಖುಷಿಯಿಂದ ಹಂಚಿಕೊಂಡು ತಿನ್ನತೊಡಗಿದರು. ಆಗ ಮಕ್ಕಳ ಗದ್ದಲ ಕೇಳಿದ ತೋಟದ ಮಾಲೀಕ ಧಾವಿಸಿ ಬಂದನು. ಅನಿರೀಕ್ಷಿತವಾಗಿ ಬಂದ ಅವನನ್ನು ಕಂಡು ಮಕ್ಕಳು ಗಲಿಬಿಲಿಗೊಂಡು ಚೆಲ್ಲಾಪಿಲ್ಲಿಯಾಗಿ ಓಡಿದರು.

ಆದರೆ ಒಬ್ಬ ಹುಡುಗ ಮಾತ್ರ ಓಡದೇ ಅಲ್ಲಿಯೇ ನಿಂತ. ಹತ್ತಿರ ಬಂದ ಮಾಲೀಕ ಹುಡುಗನನ್ನು ಹಿಡಿದು "ನಿನ್ನ ಅಪ್ಪ, ಅಮ್ಮ, ಗುರುಗಳು ಇದನ್ನೇ ಏನು ನಿನಗೆ ಕಲಿಸಿದ್ದು?" ಎಂದು ಗದರಿಸಿದ. ಹುಡುಗ ಅಳತೊಡಗಿದ. ಆಗ ಮಾಲೀಕ "ಏಕೆ ಅಳುವೆ? ನಾನೇನು ನಿನಗೆ ಹೊಡೆದೆನೆ?" ಎಂದನು. ಅದಕ್ಕೆ ಬಾಲಕ ವಿನಯದಿಂದ "ನಾನು ಮಾಡಿದ್ದು ತಪ್ಪು. ಇನ್ನೆಂದೂ ಇಂತಹ ತಪ್ಪನ್ನು ಮಾಡುವುದಿಲ್ಲ. ಆದರೆ ನಾನು ಮಾಡಿದ ತಪ್ಪಿಗೆ ನನ್ನ ತಂದೆ, ತಾಯಿ ಮತ್ತು ಗುರುಗಳು ನಿಂದನೆಗೆ ಗುರಿಯಾದರಲ್ಲಾ ಎಂದು ದುಃಖಿಸುತ್ತಿರುವೆ" ಎಂದನು.



ಬಾಲಕನ ಮುಗ್ಧ ಹಾಗೂ ಪ್ರಾಮಾಣಿಕ ಮಾತುಗಳನ್ನು ಕೇಳಿ ಮಾಲೀಕನ ಮನಸ್ಸು ಕರಗಿತು. ಆಗ ಮಾಲೀಕ "ಮಗು, ನಿನ್ನ ತಪ್ಪನ್ನು ನೀನು ಒಪ್ಪಿಕೊಂಡಿರುವೆ. ನಿನ್ನ ಪ್ರಾಮಾಣಿಕತೆ ನನಗೆ ಇಷ್ಟವಾಯಿತು. ತಪ್ಪನ್ನು ಅರಿಯುವ, ತಿದ್ದಿಕೊಳ್ಳುವ ನಿನ್ನ ಈ ಗುಣ, ನಿನ್ನನ್ನು ದೊಡ್ಡ ವ್ಯಕ್ತಿಯನ್ನಾಗಿ ಮಾಡುತ್ತದೆ" ಎಂದು ಹೇಳಿ ಮತ್ತಷ್ಟು ಮಾವಿನಹಣ್ಣುಗಳನ್ನು ನೀಡಿ ಸಮಾಧಾನಪಡಿಸಿ ಕಳುಹಿಸಿದ. ಹೀಗೆ ತನ್ನ ಪ್ರಾಮಾಣಿಕತೆಯಿಂದ ಮಾಲೀಕನ ಮನಸ್ಸನ್ನು ಗೆದ್ದ ಆ ಬಾಲಕನೇ ಲಾಲ್ ಬಹದ್ದೂರ್ ಶಾಸ್ತ್ರಿ.

ಅದು ಭಾರತದ ಸ್ವಾತಂತ್ರ್ಯ ಹೋರಾಟದ ಕಾಲ. ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಚಳುವಳಿಗಳು ಶಾಸ್ತ್ರಿಯವರನ್ನು ಆಕರ್ಷಿಸಿದವು. ದೇಶಪ್ರೇಮ ಅವರಲ್ಲಿ ಪುಟಿದೆದ್ದಿತು. ಆಗ ಗಾಂಧೀಜಿಯವರ ಒಡನಾಟದಲ್ಲಿ ಶಾಸ್ತ್ರಿಯವರು ಅನೇಕ ಚಳುವಳಿಗಳಲ್ಲಿ ಪಾಲ್ಗೊಂಡರು. ಅಂತೂ ೧೯೪೭ ಆಗಸ್ಟ್ ೧೫ರಂದು ಭಾರತ ದೇಶ ಸ್ವತಂತ್ರ ದೇಶವಾಯಿತು. ಸ್ವತಂತ್ರ ಭಾರತದ ಪ್ರಥಮ ಪ್ರಧಾನಿಯಾದ ಜವಾಹರ್‌ಲಾಲ್ ನೆಹರು ಅವರ ಮಂತ್ರಿಮಂಡಲದಲ್ಲಿ ರೈಲ್ವೇ ಮಂತ್ರಿಯಾಗಿ ಶಾಸ್ತ್ರಿಯವರು ಕಾರ್ಯ ನಿರ್ವಹಿಸಿದರು. ಆ ಸಮಯದಲ್ಲಿ ರೈಲ್ವೇ ಅಪಘಾತವೊಂದಕ್ಕೆ ತಾವೇ ಹೊಣೆ ಹೊತ್ತು ತಪ್ಪು ತಮ್ಮದಲ್ಲದಿದ್ದರೂ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಧೀಮಂತಿಕೆ ಮೆರೆದ ಇವರು ನೆಹರೂರವರ ನಂತರ ದೇಶದ ಪ್ರಧಾನಿಯಾಗಿ ಸೇವೆ ಸಲ್ಲಿಸಿದರು. ಕೇವಲ ಹದಿನೆಂಟು ತಿಂಗಳ ಅವಧಿಯಲ್ಲಿ ತಮ್ಮ ಪ್ರಾಮಾಣಿಕತೆ ಹಾಗೂ ದೇಶಪ್ರೇಮದ ನಡವಳಿಕೆಗಳಿಂದ ದೇಶದೆಲ್ಲೆಡೆ ಮನೆಮಾತಾದರು.

ಶಾಸ್ತ್ರಿಯವರು ದಕ್ಷ ಆಡಳಿತಗಾರರಾಗಿ, ಶಾಂತಿದೂತರಾಗಿ, ದೇಶ ಪ್ರೇಮಿಗಳಾಗಿ ದೇಶದ ಕೀರ್ತಿಪತಾಕೆ ಹಾರಿಸಿದರು. ಇವರು ನೀಡಿದ **'ಜೈ ಜವಾನ್ ಜೈ ಕಿಸಾನ್'** ಎಂಬ ಘೋಷವಾಕ್ಯ ಜನಮನದಲ್ಲಿ ಉಳಿಯಿತು. ಇವರ ಸೇವೆಗೆ ಭಾರತ ಸರ್ಕಾರವು **'ಭಾರತರತ್ನ'** ಪ್ರಶಸ್ತಿ ನೀಡಿ ಗೌರವಿಸಿತು.

©KTBS NOT TO BE REPUBLISHED

## ಪದಗಳ ಅರ್ಥ

ಪ್ರವೇಶಿಸು–ಒಳಗೆ ಹೋಗು; ಪ್ರಾಮಾಣಿಕತೆ–ನಂಬಿಕೆಗೆ ಅರ್ಹ; ಒಡನಾಟ–ಸಹವಾಸ, ಜೊತೆಯಲ್ಲಿರುವುದು; ಪತಾಕೆ–ಬಾವುಟ, ಧ್ವಜ.

## ಟಿಪ್ಪಣಿ

ಚಳುವಳಿ – ಸಾಮೂಹಿಕ ಹೋರಾಟ/ಸತ್ಯಾಗ್ರಹ

ಮಂತ್ರಿಮಂಡಲ – ಮಂತ್ರಿಗಳ ಸಮಿತಿ

ಘೋಷಣೆ – ಗಟ್ಟಿಯಾಗಿ ಹೇಳುವುದು/ಸಾರುವುದು

ರಾಜೀನಾಮೆ – ಉದ್ಯೋಗ, ಸ್ಥಾನ, ಅಧಿಕಾರ – ಮೊದಲಾದವುಗಳಿಂದ ಬಿಡುಗಡೆ ಮಾಡಬೇಕೆಂದು ಕೇಳಿ ತಾನೇ ಒಪ್ಪಿ ಬರೆದು ಕೊಡುವ ಪತ್ರ

## ಅಭ್ಯಾಸ

@KTBS NOT TO BE REPUBLISHED

**ಅ) ಬಿಟ್ಟಿರುವ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿ ಬರೆ.**

೧. ದಾರಿ ಬದಿಯ ______________ ತೋಪಿನಲ್ಲಿದ್ದ ಹಣ್ಣುಗಳು ಆಕರ್ಷಿಸಿದವು.

೨. ಶಾಸ್ತ್ರಿಯವರಲ್ಲಿ ______________ ಪುಟಿದೆದ್ದಿತು.

೩. ಶಾಸ್ತ್ರಿಯವರು, ಗಾಂಧೀಜಿಯವರ ಒಡನಾಟದಲ್ಲಿ ಅನೇಕ __________ ಗಳಲ್ಲಿ ಪಾಲ್ಗೊಂಡರು.

೪. ನಮ್ಮ ದೇಶವು ೧೯೪೭ ಆಗಸ್ಟ್ ______________ ರಂದು ಸ್ವತಂತ್ರವಾಯಿತು.

೫. ಭಾರತ ದೇಶದ ಪ್ರಥಮ ಪ್ರಧಾನಿ ______________

೬. ಶಾಸ್ತ್ರಿಯವರು ಜನತೆಗೆ ನೀಡಿದ ಘೋಷವಾಕ್ಯ ___________

**ಆ) ಒಂದು ವಾಕ್ಯದಲ್ಲಿ ಉತ್ತರಿಸು.**

೧. ಮಕ್ಕಳು ತೋಪನ್ನು ಏಕೆ ಪ್ರವೇಶಿಸಿದರು?

____________________________________________

೨. ಮಕ್ಕಳು ಏಕೆ ಗಲಿಬಿಲಿಗೊಂಡರು?

____________________________________________

೩. ಮಾಲೀಕನ ಮನಸ್ಸು ಏಕೆ ಕರಗಿತು?

________________________________

೪. ಶಾಸ್ತ್ರಿಯವರಿಗೆ ಸರ್ಕಾರ ಯಾವ ಪ್ರಶಸ್ತಿ ನೀಡಿ ಗೌರವಿಸಿತು?

________________________________

## ಇ) ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸು.

೧. ಬಾಲಕ ಮಾಲೀಕನಿಗೆ ಏನೆಂದು ಹೇಳಿದನು?

________________________________

________________________________

೨. ಮಾಲೀಕ ಬಾಲಕನನ್ನು ಹೇಗೆ ಸಮಾಧಾನಪಡಿಸಿದನು?

________________________________

________________________________

೩. ಶಾಸ್ತ್ರಿಯವರು ಮಂತ್ರಿ ಪದವಿಗೆ ಏಕೆ ರಾಜೀನಾಮೆ ನೀಡಿದರು?

________________________________

________________________________

## ಈ) ಈ ಕೆಳಗಿನ ಹೇಳಿಕೆಗಳಿಗೆ ಕಾರಣ ಕೊಡು.

೧. ಮಾಲೀಕ ಹೊಡೆಯದಿದ್ದರೂ ಬಾಲಕ ಅತ್ತನು.

________________________________

________________________________

೨. ಶಾಸ್ತ್ರಿಯವರು ದೇಶದೆಲ್ಲೆಡೆ ಮನೆಮಾತಾದರು.

________________________________

________________________________

@KTBS NOT TO BE REPUBLISHED

**ಉ) ಇಲ್ಲಿ ಕೊಟ್ಟಿರುವ ಮಾತುಗಳನ್ನು ಯಾರು? ಯಾರಿಗೆ ಹೇಳಿದರು? ಎಂದು ಬರೆಯಿರಿ.**

೧. "ನಿನ್ನ ಅಪ್ಪ, ಅಮ್ಮ, ಗುರುಗಳು ಇದನ್ನೇ ಏನು ಕಲಿಸಿದ್ದು?"

ಯಾರು ಹೇಳಿದರು ? ______________________________

ಯಾರಿಗೆ ಹೇಳಿದರು ? ______________________________

೨. "ಇನ್ನೆಂದೂ ಇಂತಹ ತಪ್ಪು ಮಾಡುವುದಿಲ್ಲ."

ಯಾರು ಹೇಳಿದರು ? ______________________________

ಯಾರಿಗೆ ಹೇಳಿದರು ? ______________________________

೩. "ನಿನ್ನ ಈ ಗುಣ ನಿನ್ನನ್ನು ದೊಡ್ಡ ವ್ಯಕ್ತಿಯನ್ನಾಗಿ ಮಾಡುತ್ತದೆ."

ಯಾರು ಹೇಳಿದರು ? ______________________________

ಯಾರಿಗೆ ಹೇಳಿದರು ? ______________________________

@KTBS NOT TO BE REPUBLISHED

**ಊ) ಕೊಟ್ಟಿರುವ ಪದಗಳನ್ನು ಓದಿ, ಅನಂತರ ಸ್ವಂತವಾಕ್ಯ ರಚಿಸು.**

೧. ಮನೆಮಾತಾಗು : ______________________________


೨. ಹೊಣೆಹೊತ್ತು : ______________________________


೩. ಪುಟಿದೇಳು : ______________________________

೪. ಆಕರ್ಷಿಸು : ______________________________


## ಸಾಮರ್ಥ್ಯಾಧಾರಿತ ಚಟುವಟಿಕೆ

**ಅ) ಈ ಚಿತ್ರಗಳನ್ನು ಗಮನಿಸಿ ಅವು ಏಕೆ ಬೇಕು ಎಂಬುದನ್ನು ಒಂದು ವಾಕ್ಯದಲ್ಲಿ ಬರೆಯಿರಿ.**

| | |
|---|---|
|  | |
|  | |

| | |
|---|---|
|  | |
|  | |

## ಆ) ಕೊಟ್ಟಿರುವ ಚಿತ್ರವನ್ನು ಗಮನಿಸಿ, ಪ್ರಶ್ನೆಗಳಿಗೆ ಉತ್ತರಿಸು.



೧. ನೀರು ಏಕೆ ಸುರಿಯುತ್ತಿದೆ?

____________________________________

____________________________________

೨. ನೀರು ಸುರಿಯುವುದನ್ನು ನಿಲ್ಲಿಸಬೇಕು ಏಕೆ?

____________________________________

____________________________________

@KTBS NOT TO BE REPUBLISHED


## ಭಾಷಾಭ್ಯಾಸ

## ಅ) ಮಾದರಿಯಂತೆ ವಾಕ್ಯ ರಚಿಸು.

ಮಾದರಿ : ನಾನು ಹಣ್ಣನ್ನು ತಿಂದೆನು

| | | | |
|---|---|---|---|
| ನೀನು | ಹಣ್ಣನ್ನು | ತಿಂದಿರಿ | ೧ |
| ನಾವು | | ತಿಂದೆವು | ೨ |
| ನೀವು | | ತಿಂದನು | ೩ |
| ಅವನು | | ತಿಂದೆ | ೪ |
| ಅವಳು | | ತಿಂದರು | ೫ |
| ಅವರು | | ತಿಂದಳು | ೬ |

## ಆ) ಚಿತ್ರವನ್ನು ಗಮನಿಸಿ, ಅರ್ಥಪೂರ್ಣ ವಾಕ್ಯಗಳನ್ನು ರಚಿಸಿರಿ.





ಮಾದರಿ: ಹಸುವು ಹುಲ್ಲನ್ನು ಮೇಯುತ್ತಿದೆ.

______________________________

______________________________

______________________________

______________________________

## ಭಾಷಾ ಚಟುವಟಿಕೆ

@KTBS NOT TO BE REPUBLISHED

## ಅ) ಕೆಳಗಿನ ಪದಗಳಿಗೆ ಅರ್ಥಕೋಶದಿಂದ ಅರ್ಥ ಹುಡುಕಿ ಬರೆ.

ಪಕ್ವ = ______________

ಧಾವಿಸು = ______________

ಗಲಿಬಿಲಿ = ______________

ನೇತೃತ್ವ = ______________

### ಅರ್ಥಕೋಶ ಬಳಕೆಯ ಸುಳಿವು

- ಅರ್ಥ ತಿಳಿಯಬೇಕಾದ ಪದದ ಮೊದಲ ಅಕ್ಷರವನ್ನು ತಿಳಿಯಬೇಕು.
- ಗುರುತಿಸಿಕೊಂಡ ಅಕ್ಷರವನ್ನು ಆಧರಿಸಿ ಶಬ್ದಕೋಶದಲ್ಲಿ ಆ ಪದವನ್ನು ಹುಡುಕಬೇಕು.
- ಹುಡುಕಿದ ಪದದ ಮುಂದೆ ಇರುವ ಅರ್ಥಗಳನ್ನು ತಿಳಿಯುವುದು.

W9H8A3

# ಪಾಠ ೮ ಸಂಕ್ರಾಂತಿ (ಪದ್ಯ)

**ಸಾಮರ್ಥ್ಯ :** ಪದ್ಯವನ್ನು ಓದಿ ಮುಖ್ಯ ವಿಷಯ ಗುರುತಿಸಿ ಘಟನೆಗಳನ್ನು ಅನುಕ್ರಮವಾಗಿ ಹೇಳುವುದು.

## ಪ್ರವೇಶ

ಹಬ್ಬಗಳು ಹಲವು. ಪ್ರತಿ ಹಬ್ಬದ ಆಚರಣೆಯೂ ಭಿನ್ನ. ಒಂದೊಂದು ಹಬ್ಬದಲ್ಲೂ ಒಂದೊಂದು ವಿಶೇಷತೆ ಇರುತ್ತದೆ. ಇಲ್ಲಿ ಕೊಟ್ಟಿರುವ ಹಬ್ಬದ ಆಚರಣೆಯ ವಿವರಗಳನ್ನು ತಿಳಿ. ನೀನು ಆಚರಿಸುವ ಹಬ್ಬದೊಂದಿಗೆ ಹೋಲಿಸಿ, ವ್ಯತ್ಯಾಸಗಳನ್ನು ಗೆಳೆಯರೊಂದಿಗೆ ಹಂಚಿಕೊ.

ಹಬ್ಬ ಬಂತು, ಹಬ್ಬ ಬಂತು
ಹಬ್ಬ ಬಂತು ಹಬ್ಬ!
ಅಂತೂ ಇಂತೂ ತಂದೇ ತಂತು
ಕಂತೆ ಕಂತೆ ಕಬ್ಬ! ||೧||

ಗರಿಮುರಿ ಜರತಾರಿ
ಲಂಗ ಹಾಕಿಕೊಂಡು!
ಗಿಲಿಗಿಲಿ ಕಾಲಗೆಜ್ಜೆ
ದನಿ ಮಾಡಿಕೊಂಡು! ||೨||

ಎಳ್ಳು, ಕಬ್ಬು, ಸಕ್ರೆ ಅಚ್ಚು
ಬಾಳೆ ಹಣ್ಣು, ಬೆಲ್ಲ!
ಬೀರೋಕಂತ ಹೊರಟಿದ್ದಾಳೆ
ತಂಗಿ ಕೇರಿಗೆಲ್ಲ. ||೩||

ಹೊರಟಿದ್ದಾಳೆ ಪುಟಾಣಿ ತಂಗಿ
ತನ್ನ ಗೆಳತಿ ಜೋಡಿ!
ರಂಗೇನಳ್ಳಿ ರಂಗಿನ ಗೊಂಬಿ
ಕಣ್ಣ ತುಂಬ ನೋಡಿ! ||೪||



@KTBS NOT TO BE REPUBLISHED

ಕೊಂಬನು ಹೆರೆದು, ಬಣ್ಣವ ಬಳಿದು
ಎತ್ತು–ಹಸು–ಕರುವನ್ನು!
ಕಿಚ್ಚನು ಹಾಯಿಸಿ ಕೊಡುವರು ಅಪ್ಪ
ಅಕ್ಕಿ–ಬೆಲ್ಲ–ಹಣ್ಣು! ॥೫॥

ಮಕ್ಕಳನೆಲ್ಲ ಹಸೆಯಲಿ ಕೂಡಿಸಿ
ಎಳ್ಳು–ಎಲಚಿ–ಅಚ್ಚು!
ಸುರಿಯುವಾಗ ಅಮ್ಮ ಅಜ್ಜಿ
ಮಕ್ಕಳಿಗಚ್ಚು ಮೆಚ್ಚು! ॥೬॥

– ಎಚ್.ಎಸ್.ವೆಂಕಟೇಶ ಮೂರ್ತಿ

## ಪದಗಳ ಅರ್ಥ

ಬೀರು – ಹಂಚು, ವಿತರಿಸು; ಕಂತೆ – ಕಟ್ಟು; ಕೇರಿ – ಓಣಿ; ಕಿಚ್ಚು – ಬೆಂಕಿ; ಜೋಡಿ – ಜೊತೆ.

## ಟಿಪ್ಪಣಿ

ಹಸೆ – ಶುಭಕಾರ್ಯಗಳಿಗೆ ಹಾಕುವ ಆಸನ
ಜರತಾರಿ – ಜರಿಯಿಂದ ಕೂಡಿದ ವಸ್ತ್ರ/ಬಟ್ಟೆ
ಎಲಚಿ – ಒಂದು ಜಾತಿಯ ಹಣ್ಣು
ಗರಿಮುರಿ ಬಟ್ಟೆ – ಮಡಿಕೆ ಮುರಿಯದ ಬಟ್ಟೆ

@KTBS NOT TO BE REPUBLISHED

## ಅಭ್ಯಾಸ

**ಅ) ಒಂದು ವಾಕ್ಯದಲ್ಲಿ ಉತ್ತರಿಸು.**

೧. ತಂಗಿಯು ಯಾವ ಲಂಗ ಹಾಕಿಕೊಂಡಿದ್ದಳು?

______________________________

೨. ಗೆಳತಿಯ ಜೊತೆ ತಂಗಿ ಕೇರಿಗೆ ಹೊರಟಿದ್ದು ಏಕೆ?

______________________________

೩. ಅಪ್ಪ ದನಕರುಗಳಿಗೆ ಏನು ಕೊಟ್ಟರು?

______________________________

೪. ಮಕ್ಕಳನ್ನು ಹಸೆಯಲ್ಲಿ ಕೂರಿಸಿ ಏನು ಮಾಡುವರು?

___

೫. 'ಸಂಕ್ರಾಂತಿ' ಪದ್ಯವನ್ನು ಬರೆದ ಕವಿಯ ಹೆಸರೇನು?

___

**ಆ) 'ಅ' ಪಟ್ಟಿಯಲ್ಲಿರುವ ವಾಕ್ಯಗಳನ್ನು 'ಬ' ಪಟ್ಟಿಯಲ್ಲಿರುವ ವಾಕ್ಯಗಳೊಂದಿಗೆ ಹೊಂದಿಸಿ ಬರೆ.**

| 'ಅ' | 'ಬ' |
|---|---|
| ೧. ಗರಿಮುರಿ ಜರತಾರಿ | ೧. ತಂಗಿ ಕೇರಿಗೆಲ್ಲ |
| ೨. ಬೀರೋಕಂತ ಹೊರಟಿದ್ದಾಳೆ | ೨. ಅಕ್ಕಿ–ಬೆಲ್ಲ–ಹಣ್ಣು |
| ೩. ರಂಗೇನಳ್ಳಿ ರಂಗಿನ ಗೊಂಬೆ | ೩. ಮಕ್ಕಳಿಗಚ್ಚು ಮೆಚ್ಚು |
| ೪. ಕಿಚ್ಚನು ಹಾಯಿಸಿ ಕೊಡುವರು ಅಪ್ಪ | ೪. ಲಂಗ ಹಾಕಿಕೊಂಡು |
| ೫. ಸುರಿಯುವಾಗ ಅಮ್ಮ ಅಜ್ಜಿ | ೫. ಕಣ್ಣ ತುಂಬ ನೋಡಿ |

ಉತ್ತರ :

೧. ............................

೨. ............................

೩. ............................

೪. ............................

೫. ............................

@KTBS NOT TO BE REPUBLISHED

## ಸಾಮರ್ಥ್ಯಾಧಾರಿತ ಅಭ್ಯಾಸ

**ಅ) ಪದ್ಯವನ್ನು ಆಧರಿಸಿ ಈ ಘಟನೆಗಳನ್ನು ಅನುಕ್ರಮವಾಗಿ ಗುರುತಿಸಿ ಬರೆ.**

೧. ಮಕ್ಕಳನ್ನು ಹಸೆಯಲ್ಲಿ ಕೂರಿಸಿ, ಎಳ್ಳು-ಎಲಚಿ-ಅಚ್ಚುಗಳನ್ನು ಅಮ್ಮ ಅಜ್ಜಿ ಸುರಿಯುವರು.

೨. ಪುಟಾಣಿ ತಂಗಿ ತನ್ನ ಗೆಳತಿ ಜೊತೆ ಎಳ್ಳು, ಬೆಲ್ಲ ಬೀರಲು ಹೊರಟಳು.

೩. ತಂಗಿಯು ಗರಿಮುರಿ ಜರತಾರಿ ಲಂಗ ಹಾಕಿಕೊಂಡಳು.

೪. ಎತ್ತು ಹಸು ಕರುಗಳನ್ನು ಕೊಂಬು ಹೆರೆದು ಬಣ್ಣವ ಬಳಿದು ಶೃಂಗಾರ ಮಾಡಿದರು.

______________________________

______________________________

______________________________

______________________________

______________________________

@KTBS NOT TO BE REPUBLISHED

**ಆ) ನಿಮ್ಮ ಮನೆಯಲ್ಲಿ ನೀನು ಬೆಳಗ್ಗೆ ಎದ್ದ ನಂತರ ಶಾಲೆಗೆ ಹೋಗುವವರೆಗಿನ ನಾಲ್ಕು ಘಟನೆಗಳನ್ನು ನೆನಪಿಸಿಕೊಂಡು, ಅನುಕ್ರಮವಾಗಿ ಬರೆ.**

೧. ______________________________

೨. ______________________________

೩. ______________________________

೪. ______________________________

## ಭಾಷಾಭ್ಯಾಸ

**ನಿನಗಿದು ತಿಳಿದಿರಲಿ :** 'ಗಂಡು' ಎಂಬ ಅರ್ಥ ಬರುವ ಪದಗಳಿಗೆ 'ಪುಲ್ಲಿಂಗ' ಎಂದೂ 'ಹೆಣ್ಣು' ಎಂಬ ಅರ್ಥ ಬರುವ ಪದಗಳಿಗೆ 'ಸ್ತ್ರೀಲಿಂಗ' ಎಂದೂ ಹಾಗೂ 'ಗಂಡು' 'ಹೆಣ್ಣು' ಎಂಬ ಎರಡೂ ಅರ್ಥ ಬರದ ಪದಗಳಿಗೆ 'ನಪುಂಸಕಲಿಂಗ' ಎಂದು ಹೆಸರು.

ಅ) **ಕೆಳಗಿನ ವಾಕ್ಯಗಳನ್ನು ಆವರಣದಲ್ಲಿ ಕೊಟ್ಟಿರುವ ಸೂಚನೆಗಳಿಗೆ ಅನುಸಾರವಾಗಿ ಬರೆಯಿರಿ.**

೧. ಹುಡುಗಿಯು ತರಕಾರಿಯನ್ನು ತಂದಳು. (ಇದನ್ನು ಪುಲ್ಲಿಂಗ ರೂಪದಲ್ಲಿ ಬರೆ)

______________________________

೨. ರಾಜು ಗಾಡಿಯನ್ನು ಎಳೆದನು. ('ರಾಜು' ಎಂಬ ಪದದ ಬದಲಿಗೆ 'ಎತ್ತು' ಎಂಬ ಪದ ಬಳಸಿ, ವಾಕ್ಯ ರಚಿಸಿ)

______________________________

೩. ಅಣ್ಣ ತಮ್ಮಂದಿರು ಸ್ನೇಹಿತರಂತೆ ಇದ್ದರು. (ಇದನ್ನು ಸ್ತ್ರೀಲಿಂಗ ರೂಪದಲ್ಲಿ ಬರೆ.)

______________________________

ಆ) **ಕೆಳಗೆ ಕೊಟ್ಟಿರುವ ಪದಗಳನ್ನು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗಗಳಾಗಿ ವಿಂಗಡಿಸಿ ಬರೆ.**

(ಪುಸ್ತಕ, ರಾಣಿ, ತಮ್ಮ, ಮೇಜು, ಗೋಡೆ, ರಾಜ, ತಂಗಿ, ಅಕ್ಕ, ತಮ್ಮ, ಶಾಲೆ, ಅಣ್ಣ, ತಂಗಿ, ತಂದೆ, ತಾಯಿ, ಸಹೋದರಿ, ಗೆಳೆಯ, ಕುರ್ಚಿ, ಗೆಳತಿ)

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕ ಲಿಂಗ |
|---|---|---|
| | | |

@KTBS NOT TO BE REPUBLISHED

## ಭಾಷಾ ಚಟುವಟಿಕೆ

ಅ) **ಸಂಕ್ರಾಂತಿ ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಆರಿಸಿ ಬರೆ.**

______________________________

______________________________

______________________________

______________________________